# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY

ಸಂಪುಟ:01 Volume:01 • ಸಂಚಿಕೆ:234 Issue:234 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 10.02.2024 • ಶನಿವಾರ Saturday • ಪುಟ:04 Page:04 • ಬೆಲೆ:2 Rs:2



ಹಂಪಿ ಟೈಮ್ಸ್
With Your support
HAMPI TIMES E-Paper reached
2 Lakh + Views
4 Lakh + Events Count
40,000+ Readers



Send Your Feedback to Email : hampitimes@gmail.com



WE ARE OPEN for Every Function

Hall is a Perfect suit for a meeting, Your Son & Daughters marriage, your child's birthday party, wedding reception or a business seminar. This a best party place located in hosapet, Vijayanagara Dist.

V N Royal Garden Function Hall



Behind Meeralam Talkies, Hosapete-583201 Vijayanagara Dist. Contact For Booking: 9980136034, 9880701217


# ಮಕ್ಕಳ ತುತ್ತು ಕಸಿದವರಿಗೆ ಪಾಪ ತಟ್ಟಲಿದೆ

## ಕಾಂಗ್ರೆಸ್ ಜಿಲ್ಲಾ ಸಮಿತಿ ಅಧ್ಯಕ್ಷ ಸಿರಾಜ್ ಶೇಖ್ ಹೇಳಿಕೆ । ಆಹಾರ ಪೂರೈಕೆಯಲ್ಲಿ ಅವ್ಯವಹಾರ । ಹಂಪಿ ಸಂಸ್ಕೃತಿಗೆ ಧಕ್ಕೆ ತಂದ ಸಾಧು ಕೋಕಿಲ!

**ಹಂಪಿ ಟೈಮ್ಸ್ ಹೊಸಪೇಟೆ**

ಅಂಗನವಾಡಿಗಳಿಗೆ ಪೂರೈಸುವ ಪೌಷ್ಟಿಕ ಆಹಾರದಲ್ಲೆ ಅವ್ಯವಹಾರ ನಡೆಯುತ್ತಿದ್ದರೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಝಡ್.ಜಮೀರ್ ಅಹ್ಮದ್ ಖಾನ್ ಅವರ ಮೌನ ಅವ್ಯವಹಾರ ನಡೆಸುವವರಿಗೆ ಪುಷ್ಠಿನೀಡಿದಂತಾಗಿದೆ. ಮೂರು ತಿಂಗಳಾದರೂ ಹಲವು ಅಂಗನವಾಡಿಗಳಿಗೆ ಆಹಾರ ಪೂರೈಕೆಯಾಗಿಲ್ಲ. ಆಹಾರ ಪೂರೈಸದ ಗುತ್ತಿಗೆದಾರರು, ಆಹಾರ ಪೂರೈಕೆಯ ಅವ್ಯವಹಾರದಲ್ಲಿ ತೊಡಗಿದವರ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮಕೈಗೊಳ್ಳದಿದ್ದರೆ ಬೀದಿಗಿಳಿದು ಹೋರಾಟ ಮಾಡಲಾಗುವುದು ಎಂದು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಸಿರಾಜ್ ಶೇಖ್ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಶುಕ್ರವಾರ ಮಾತನಾಡಿದರು. ಅಂಗನವಾಡಿಗಳಿಗೆ ಸಮರ್ಪಕವಾಗಿ ಆಹಾರ ಪೂರೈಕೆಯಾಗುತ್ತದೆಯೇ ಎಂಬುದರ ಕುರಿತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೂ ಮಾಹಿತಿ ಇಲ್ಲ. ಗರ್ಭಿಣಿ, ಬಾಣಂತಿಯರಿಗೆ ಪೌಷ್ಟಿಕ ಆಹಾರ ಕೊರತೆಯಿಂದ ಮಕ್ಕಳ ಸಾವಿನ ಸಂಖ್ಯೆಯಲ್ಲೂ ಹೆಚ್ಚುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಬೇಕು. ಕೂಡಲೇ ಕೆಲವೆಡೆ ಅವಧಿ ಮೀರಿ ಪೂರೈಸಿದ ಪ್ಯಾಕೇಟ್ ಆಹಾರಗಳು ಕಳಪೆಯಾಗಿದ್ದು, ಮಕ್ಕಳು ತಿನ್ನುತ್ತಿಲ್ಲ. ಸರ್ಕಾರದ ಮಹತ್ವಾಕಾಂಕ್ಷಿ ಈ ಯೋಜನೆಗೆ ವಿಜಯನಗರ ಜಿಲ್ಲೆಯೊಂದಕ್ಕೆ ತಿಂಗಳಿಗೆ 5 ಕೋಟಿ ರೂಪಾಯಿಗೂ ಅಧಿಕ ವೆಚ್ಚ ಮಾಡುತ್ತಿದೆ. ಸರ್ಕಾರ ಪ್ರತಿ ತಾಲೂಕಿಗೆ



1.24 ಕೋಟಿ ರೂಗಳನ್ನು ತಿಂಗಳಿಗೆ ವೆಚ್ಚ ಮಾಡುತ್ತಿದೆ. ಯೋಜನೆಯನ್ನು ಸಮರ್ಪಕ ಅನುಷ್ಠಾನಗೊಳಿಸುವಲ್ಲಿ ಅಧಿಕಾರಿಗಳ ಅಸಡ್ಡೆ ಮೇಲ್ನೋಟಕ್ಕೆ ಎದ್ದುಕಾಣುತ್ತದೆ. ಆಹಾರ ಪೂರೈಸುವವರ ಅವಧಿ ಪೂರ್ಣಗೊಂಡ ನಂತರವೂ ಟೆಂಡರ್ ಪ್ರಕ್ರಿಯೆ ನಡೆಯದೆ ಅವರನ್ನೇ ಮುಂದುವರೆಸಿರುವುದು ಹಲವು ಅನುಮಾನ, ಅವ್ಯವಹಾರಕ್ಕೆ ದಾರಿಮಾಡಿಕೊಟ್ಟಂತಿದೆ. ಅಂಗನವಾಡಿ ಮಕ್ಕಳು ಮೂರು ತಿಂಗಳಿಗೊಮ್ಮೆ ಊಟ ಮಾಡಬೇಕೆ? ಇಲಾಖೆ ಕೊಡುವ ಆಹಾರಕ್ಕಾಗಿಯೇ ಮಗು ಹಸಿವಿನಿಂದ ಕಾಯಲು ಸಾಧ್ಯವೇ? ಆಹಾರ ಪೂರೈಕೆ ಸಮಿತಿಯ ಅಧ್ಯಕ್ಷರು ಜಿಲ್ಲಾಧಿಕಾರಿಗಳಾಗಿರುತ್ತಾರೆ. ಜಿಲ್ಲಾ ಕೇಂದ್ರ ಹೊಸಪೇಟೆ ತಾಲೂಕಿನಲ್ಲೇ 343 ಅಂಗನವಾಡಿ ಕೇಂದ್ರಗಳಿವೆ. ಜಿಲ್ಲೆಯ ಹರಪನಹಳ್ಳಿ, ಕೂಡ್ಲಿಗಿ ತಾಲೂಕಿನಲ್ಲಿ ಹೆಚ್ಚು ಕೇಂದ್ರಗಳಿವೆ. ಕಾಂಗ್ರೆಸ್ ಸರ್ಕಾರ ಬಿಪಿಎಲ್ ಕುಟುಂಬಗಳ ಬಲವರ್ಧನೆ, ಸದೃಢತೆಗಾಗಿ ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತಿದೆ. ಲೋಪದೋಷಗಳನ್ನು ತೋರಿಸಲಾಗಿದ್ದು, ಸರಿಪಡಿಸಿಕೊಳ್ಳದಿದ್ದರೆ ಉಗ್ರ ಹೋರಾಟ ನಿಶ್ಚಿತ ಎಂದರು.

ಹಂಪಿ ಉತ್ಸವ ಧ್ವನಿ ಮತ್ತು ಬೆಳಕು ಕಾರ್ಯಕ್ರಮ ಉತ್ತಮವಾಗಿ ಮೂಡಿಬಂದಿದ್ದು ಸ್ಥಳೀಯ ಕಲಾವಿದರಿಗೆ ಆದ್ಯತೆ ನೀಡಿರುವುದು ಉತ್ತಮ ಕಾರ್ಯವಾಗಿದೆ. ಆದರೆ ಹೊರಗಿನ ಕಲಾವಿದರೆ ಹೆಚ್ಚು ಸಂಭಾವನೆ, ಸ್ಥಳೀಯರಿಗೆ ಕಡಿಮೆ ಕೊಟ್ಟು ತಾರತಮ್ಯ ಮಾಡಿರುವುದು ಸರಿಯಲ್ಲ. ಹಂಪಿ ಉತ್ಸವದ ಮುಖ್ಯವೇದಿಕೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಖಾನ್ ಅವರ ಪುತ್ರ ಮತ್ತು ಸಂಗೀತ ನಿರ್ದೇಶಕ ಸಾಧು ಕೋಕಿಲ ಅವರ ಅಶ್ಲೀಲ ಸಂಭಾಷಣೆ (ನರ್ವಸ್ ಆಗ್ಬುಟ್ಟೆ... ಅದಕ್ಕೆ ಜೊತೆಗೆ ಹೀರೋಯಿನ್‌ನನ್ನು ಕೊಟ್ಟೆ, ನರ್ವಸ್ ಆದ್ರಾ ಅ ಯಮ್ಮನ ಈಕಡೆ ಬೀಸಾಕು... ಮತ್ತೆ ನರ್ವಸ್ ಆದ್ರೆ ಆಕಡೆ ಎಳ್ಕೋ... ತುಂಬಾ ನರ್ವಸ್ ಆದ್ರೆ ತೊಡೆ ಮೇಲೆ...) ಎನ್ನುವ ಅಶ್ಲೀಲ ಪದ ಬಳಸಿ ಹಂಪಿಯ ಸಂಸ್ಕೃತಿಗೆ ಧಕ್ಕೆ ತಂದಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವರು ವಕ್ಫ್ ಖಾತೆಯನ್ನು ಹೊಂದಿದ್ದಾರೆ. ಆದರೆ ನಗರದ 40 ಮಸೀದಿಗಳ ಪೈಕಿ 32 ನೋಂದಣಿಗೊಂಡಿವೆ. ಬೈಲಾ ಪ್ರಕಾರ ಯಾವುದೂ ನಡೆಯುತ್ತಿಲ್ಲ. ಪರಿಶೀಲಿಸಿ ಕ್ರಮಕೈಗೊಳ್ಳಬೇಕು. ನಗರದ 58 ಸ್ಲಂಗಳ ಪೈಕಿ 33 ಸ್ಲಂಗಳು ಅಧಿಕೃತವಾಗಿವೆ. ಸ್ಲಂಗಳ ಅಭಿವೃದ್ಧಿಗೆ ಇಂದಿಗೂ ಭೇಟಿ ನೀಡಿಲ್ಲ. ಕೆಡಿಪಿ ಮೀಟಿಂಗ್, ಸ್ವಾತಂತ್ರ್ಯೋತ್ಸವ , ಗಣರಾಜ್ಯೋತ್ಸವ, ಹಂಪಿ ಉತ್ಸವದಂತ ಪ್ರಮುಖ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡರೆ ಸಾಲದು. ಈ ಹಿಂದೆ ಹೇಳಿದಂತೆ ಜಿಲ್ಲಾ ಉಸ್ತುವಾರಿಗಳು ಬದಲಾಗಬೇಕು. ಇಲ್ಲದಿದ್ದರೆ ಜಿಲ್ಲೆಯ ಸಮಗ್ರ ಅಭಿವೃದ್ಧಿಯಲ್ಲಿ ಸಮರ್ಪಕವಾಗಿ ತೊಡಗಿಸಿಕೊಳ್ಳಬೇಕು. ಕಾಂಗ್ರೆಸ್ ಸರ್ಕಾರ ಈ ಹಿಂದೆ ಗ್ಯಾರಂಟಿ ಕಾರ್ಡ್‌ಗಳನ್ನು ನೀಡಿದೆ. ಕಾಂಗ್ರೆಸ್ ಸರ್ಕಾರಕ್ಕೆ ಕಿಂಚಿತ್ತು ಧಕ್ಕೆಯಾದರೂ ನಾನು ಸಹಿಸಿಕೊಳ್ಳಲ್ಲ. ಸಾಮಾನ್ಯ ಕಾರ್ಯಕರ್ತರೊಂದಿಗೆ ಬೀದಿಗಿಳಿದು ಹೋರಾಡುವೆ. ಎಲ್ಲಾ ತಪ್ಪುಗಳನ್ನು ಬಯಲಿಗೆ ಎಳೆಯುವೆ ಎಂದರು.

ಮುಖಂಡರಾದ ನಿಂಬಗಲ್ ರಾಮಕೃಷ್ಣ, ತಮ್ಮೆಳ್ಳಪ್ಪ, ಮಂಜುನಾಥ ಇತರರು ಇದ್ದರು.

ಮೈಕ್ರೋ ನ್ಯೂಸ್

## ಮಾರ್ಚ್-4ಕ್ಕೆ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿ ರಥೋತ್ಸವ: ಸಿದ್ಧಗೊಳ್ಳುತ್ತಿದೆ ತೇರು ಬಯಲು ಜಾಗ



**ಹಂಪಿ ಟೈಮ್ಸ್ ಕೊಟ್ಟೂರು**

ಪಟ್ಟಣದ ಆರಾಧ್ಯ ದೇವರು ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿ ರಥೋತ್ಸವದ ನಿಮಿತ್ತ ಪಟ್ಟಣ ಪಂಚಾಯತಿ ವತಿಯಿಂದ ತೇರು ಬಯಲು ಜಾಗವನ್ನು ಸ್ವಚ್ಛತೆಗೊಳ್ಳುತ್ತಿದೆ.

ಮಾರ್ಚ್-4ಕ್ಕೆ ಕೊಟ್ಟೂರೇಶ್ವರ ಸ್ವಾಮಿ ರಥೋತ್ಸವ ಜರುಗುವ ಹಿನ್ನೆಲೆ ತೇರು ಬಯಲು ಪ್ರದೇಶವನ್ನು ಶುಕ್ರವಾರ ಪ.ಪಂ ಮುಖ್ಯಾಧಿಕಾರಿ ಎ.ನಸರುಲ್ಲಾ ಅವರು ಪಟ್ಟಣ ಪಂಚಾಯತಿ 2 ಜೆಸಿಬಿ ಯಂತ್ರಗಳನ್ನು ಬಳಸಿ ಸ್ವಚ್ಛತೆ ಕಾರ್ಯ ಕೈಗೊಂಡರು. ಪ್ರತಿ ವರ್ಷದ ಸಂಪ್ರದಾಯದಂತೆ ಫೆ-14 ಕ್ಕೆ ಧಾರ್ಮಿಕ ಪೂಜಾ ಕೈಂಕಾರ್ಯಗಳನ್ನು ನೆರವೇರಿಸಿ, ಶೆಡ್ಡಿನಿಂದ ತೇರು ಗಾಲಿ ಹೊರ ಹಾಕುವರು, ಶ್ರೀಸ್ವಾಮಿಯ ಕ್ರಿಯಾಮೂರ್ತಿಗಳು ಶಿವಪ್ರಕಾಶ ಕೊಟ್ಟೂರು ದೇವರು ಮಹಲ್ ಮಠ, ಧರ್ಮಕರ್ತರು ಸಿಎಚ್ಎಂ ಗಂಗಾಧರ, ದತ್ತಿ ಇಲಾಖೆ ಇಒ ಕೃಷ್ಣಪ್ಪ, ಅರ್ಚಕರು ಮತ್ತು ಆಯಗಾರರು, ದೈವಸ್ಥರು ಹಾಗೂ ಭಕ್ತರು ಜಯ ಘೋಷಗಳೊಂದಿಗೆ ತೇರು ಗಡ್ಡೆಯನ್ನು, ತೇರು ಬಯಲು ಪ್ರದೇಶಕ್ಕೆ ಎಳೆತಂದು ನಿಲ್ಲಿಸುವರು.

ರಥ ಕಟ್ಟುವಲ್ಲಿ ಪ್ರಾವೀಣ್ಯತೆ ಪಡೆದಿರುವ ಪಟ್ಟಣದ ಕೋಟೆ ಪ್ರದೇಶದ ಆಯಗಾರ ಬಳಗವು, ರಥೋತ್ಸವ ಜರುಗುವ 10-15 ದಿನಗಳ ಮುನ್ನ, ಶ್ರದ್ಧೆ ಮತ್ತು ಭಕ್ತಿಯಿಂದ 50-60 ಅಡಿ ಎತ್ತರದ, ನಾಲ್ಕು ಅಂಕಣದ ತೇರನ್ನು ಭದ್ರವಾಗಿ ಕಟ್ಟಿ ನಿಲ್ಲಿಸುವರು.

ರಥೋತ್ಸವ ಜರುಗುವ 2 ದಿನಗಳ ಹಿಂದೆ ಕಟ್ಟಿರುವ ರಥಕ್ಕೆ ವಿವಿಧ ದೇವರುಗಳ ಪೋಟೋ ಮತ್ತು ಬಣ್ಣ ಬಣ್ಣದ ವಸ್ತ್ರಗಳಿಂದ, ಪಟಗಳಿಂದ ರಥವನ್ನು ಶೃಂಗರಿಸಿ, ಮೇಲೊಂದು ಕಳಸವಿರಿಸಿ ನೋಡುಗರನ್ನು ಆಕರ್ಷಿಸುವಂತೆ ಮತ್ತು ಭಕ್ತರಲ್ಲಿ ಭಕ್ತಿ ಮೂಡುವಂತೆ ಸಿದ್ದಗೊಳಿಸುವರು.

ಸ್ವಚ್ಛತೆ ಸಂದರ್ಭದಲ್ಲಿ ಪಟ್ಟಣ ಪಂಚಾಯತಿ ಸಿಬ್ಬಂದಿ ಹೇಮನಗೌಡ, ಜಗದೀಶ್, ಮಾದೂರು ಕೊಟ್ರೇಶ್, ರಮೇಶ್, ಅಂಜಿನಪ್ಪ ಇತರರು ಹಾಜರಿದ್ದರು.

ಮೈಮೇಲೆ ಹರಿದ ಬಟ್ಟೆ
ಇದ್ದರೂ ಚಿಂತೆಯಿಲ್ಲ.
ಕೈಯಲ್ಲೊಂದು
ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

# ಪಿಯುಸಿ ಆಯ್ಕೆಗೆ ಎಸ್ಸೆಸ್ಸೆಲ್ಸಿ ಫಲಿತಾಂಶ ಸಹಕಾರಿ

## ತಾಯಮ್ಮ ಶಕ್ತಿ ಸಂಸ್ಥೆಯ ಸಂಸ್ಥಾಪಕಿ, ನಿರ್ದೇಶಕಿ ಕವಿತಾ ಈಶ್ವರ್‌ಸಿಂಗ್ ಹೇಳಿಕೆ
## ಹೊಸಪೇಟೆ ತಾಲೂಕು ಗ್ರಾಮೀಣ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಉಚಿತ ಟ್ಯೂಷನ್‌ಗೆ ಚಾಲನೆ



**ಹಂಪಿ ಟೈಮ್ಸ್ ಹೊಸಪೇಟೆ**

ಎಸ್ ಎಸ್ ಎಲ್ ಸಿ ಪರೀಕ್ಷೆಯನ್ನು ಸಂಭ್ರಮದಿಂದ ಎದುರಿಸಲು ವಿದ್ಯಾರ್ಥಿಗಳು ಸನ್ನದ್ಧರಾಗಬೇಕು. ಕಲಿಕೆಯಲ್ಲಿ ಹಿಂದುಳಿದಾಗ ಮಾತ್ರ ನಮ್ಮಲ್ಲಿ ಭಯ ಆವರಿಸುತ್ತದೆ. ಗ್ರಾಮೀಣ ಮಕ್ಕಳಲ್ಲಿ ಪರೀಕ್ಷೆ ಭಯ ತೊಲಗಿಸಿ ಸಂಭ್ರಮದಿಂದ ಪರೀಕ್ಷೆ ಬರೆದು ಉತ್ತಮ ಅಂಕಗಳೊಂದಿಗೆ ಉತ್ತೀರ್ಣರಾಗಬೇಕೆಂಬ ಆಶಯದೊಂದಿಗೆ ತಾಯಮ್ಮ ಶಕ್ತಿ ಸಂಸ್ಥೆಯಿಂದ ಎರಡು ತಿಂಗಳು ಕಾಲ ಉಚಿತ ಟ್ಯೂಷನ್ ಆಯೋಜಿಸಲಾಗಿದೆ ಎಂದು ತಾಯಮ್ಮ ಶಕ್ತಿ ಸಂಸ್ಥೆಯ ನಿರ್ದೇಶಕಿ ಕವಿತಾ ಈಶ್ವರ್‌ಸಿಂಗ್ ಹೇಳಿದರು.

ತಾಲೂಕಿನ ಕಾಕುಬಾಳು ಸರ್ಕಾರಿ ಪ್ರೌಢಶಾಲೆಯಲ್ಲಿ ಗುರುವಾರ ಶ್ರೀ ತಾಯಮ್ಮ ಶಕ್ತಿ ಸಂಸ್ಥೆ(ರಿ) ಮತ್ತು ಡಾ.ಪುನೀತ್ ರಾಜಕುಮಾರ್ ಅಭಿಮಾನಿ ಬಳಗ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಸರ್ಕಾರಿ ಪ್ರೌಢಶಾಲಾ ಮಕ್ಕಳಿಗೆ ಉಚಿತ ತರಬೇತಿ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದರು. ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಪಡೆಯುವ ಅಂಕಗಳು ಭವಿಷ್ಯ ಶಿಕ್ಷಣದ ಆಯ್ಕೆಗೆ ಸಹಕಾರಿಯಾಗಲಿದೆ. ಗ್ರಾಮೀಣ ಮಕ್ಕಳಿಗೆ ಗಣಿತ, ವಿಜ್ಞಾನ ಮತ್ತು ಇಂಗ್ಲೀಷ್ ವಿಷಯಗಳ ಕುರಿತು ತರಬೇತಿ ನೀಡಲಾಗುತ್ತದೆ. 8, 9 ಮತ್ತು 10ನೇ ತರಗತಿ ಮಕ್ಕಳಿಗೆ ತರಬೇತಿ ನೀಡಲಾಗುತ್ತಿದೆ. ಎಸ್ಸೆಸ್ಸೆಲ್ಸಿ ಮಕ್ಕಳು ಶಿಬಿರದ ಪ್ರಯೋಜನಪಡೆದು, ಹೆಚ್ಚು ಅಂಕಗಳೊಂದಿಗೆ ಉತ್ತೀರ್ಣರಾಗಿ, ಪದವಿಪೂರ್ವ ಶಿಕ್ಷಣ ಪಡೆಯಬೇಕು. ಈಗಾಗಲೇ ವಿಷಯವಾರು ಶಿಕ್ಷಕರು ತರಬೇತಿ ನೀಡಿದ್ದಾರೆ. ಪರೀಕ್ಷೆಗೂ ಮುನ್ನ ಪುನರ್ಮನನ, ಪುನರಭ್ಯಾಸ ಹೆಚ್ಚೆಚ್ಚು ಮಾಡಿದಷ್ಟು ಪರೀಕ್ಷೆಯ ಭಯ ದೂರಾಗುತ್ತದೆ. ಪ್ರತಿಯೊಂದು ವಿಷಯವನ್ನು ಅರ್ಥೈಸಿಕೊಳ್ಳಬೇಕು. ಅರ್ಥವಾಗದಿದ್ದರೆ ಕೂಡಲೇ ಶಿಕ್ಷಕರನ್ನು ಕೇಳಿದರೆ ಸಂತೋಷದಿಂದ ಹೇಳಿಕೊಡುತ್ತಾರೆ. ಓದಿನಲ್ಲಿ ತೊಡಗಿಸಿಕೊಂಡವರಿಗೆ ಹೆಚ್ಚು ಪ್ರಶ್ನೆಗಳು ಎದುರಾಗುತ್ತವೆ. ಎಲ್ಲಾ ಪ್ರಶ್ನೆಗಳಿಗೂ ಶಿಕ್ಷಕರ ಸುಲಭ ಪರಿಹಾರ ಹೇಳಿಕೊಡುತ್ತಾರೆ. ನಗರದ ಮಕ್ಕಳಿಗೆ ಟ್ಯೂಷನ್, ಹಳ್ಳಿ ಮಕ್ಕಳಿಗೆ ಇಲ್ಲವೆಂಬ ಕೊರಗನ್ನು ಈ ಶಿಬಿರ ದೂರಾಗಿಸಲಿದೆ ಎಂದರು.

ಸಂಸ್ಥೆಯ ನಿರ್ದೇಶಕಿ ಲಲಿತಾ ನಾಯಕ, ಪುನೀತ್‌ರಾಜ್ ಕುಮಾರ ಅಭಿಮಾನಿ ಬಳಗದ ಅಧ್ಯಕ್ಷ ರಘುನಾಯಕ, ಕಾಕುಬಾಳು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಕಾಳಮ್ಮ, ಅಂಬರೀಶ್, ಮಂಜುನಾಥ ಸೇರಿದಂತೆ ಶಾಲಾ ಶಿಕ್ಷಕರು, ಮುಖಂಡರು, ಸಂಸ್ಥೆಯ ಸದಸ್ಯರು ಇದ್ದರು.



# ಅನಧಿಕೃತ ಕ್ಲಿನಿಕ್, ಲ್ಯಾಬ್‌ಗಳಿಗೆ ದಂಡ ವಿಧಿಸಿದ ಜಿಲ್ಲಾಧಿಕಾರಿ

**ಹಂಪಿ ಟೈಮ್ಸ್ ಹೊಸಪೇಟೆ**

ಕೆ.ಪಿ.ಎಂ.ಇ. ನೋಂದಣಿ ಇಲ್ಲದ ನಗರದಲ್ಲಿ ಅನಧಿಕೃತವಾಗಿ ನಡೆಸುತ್ತಿದ್ದ ವಿವಿಧ ಖಾಸಗಿ ಕ್ಲಿನಿಕ್‌ಗಳ ಮೇಲೆ ಇತ್ತೀಚೆಗೆ ಜಿಲ್ಲಾ ಆರೋಗ್ಯ ಇಲಾಖೆ ಅಧಿಕಾರಿಗಳ ತಂಡ ದಾಳಿ ನಡೆಸಿ ಸೀಜ್ ಮಾಡಿ ಪ್ರಕರಣ ದಾಖಲಿಸಿಕೊಂಡಿತ್ತು.

ಶುಕ್ರವಾರ ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಕೆ.ಪಿ.ಎಂ.ಇ. ಸಕ್ಷಮಾ ಪ್ರಾಧಿಕಾರದ ಅಧ್ಯಕ್ಷರಾದ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರು ಪ್ರಕರಣಗಳ ವಿಚಾರಣೆ ನಡೆಸಿದರು. ನಗರದ ಗುರುಕೃಪ ಖಾಸಗಿ ಕ್ಲಿನಿಕ್ ನಡೆಸುತ್ತಿದ್ದ ಡಾ.ರಾಧ ಗುರುಬಸವರಾಜಗೆ 50,000 ರೂ ದಂಡ ಮತ್ತು ಎಚ್ಚರಿಕೆ ನೋಟೀಸು ನೀಡಿದ್ದಾರೆ. ವೈದ್ಯ ವಿದ್ವಾನ್ ಪ್ರಮಾಣ ಪತ್ರ ರದ್ದಾಗಿದ್ದರೂ ಶ್ರೀನಿವಾಸ ಕ್ಲಿನಿಕ್ ನಡೆಸುತ್ತಿದ್ದ ಮಲ್ಲಪ್ಪ ಆಚಾರ್‌ಗೆ 1 ಲಕ್ಷ ರೂ ದಂಡ ವಿಧಿಸಿ ಸಂಪೂರ್ಣ ಕ್ಲಿನಿಕ್ ರದ್ದುಗೊಳಿಸಲು ಆದೇಶ ನೀಡಿದ್ದಾರೆ.

ಲೈಪ್ ಕೇರ್ ಲ್ಯಾಬ್ 50,000 ದಂಡ ವಿಧಿಸಿ ನೊಂದಣಿ ಮಾಡಿಸಲು ಅದೇಶಿಸಿ ಎಚ್ಚರಿಕೆ ನೋಟೀಸ್ ನೀಡಿದ್ದಾರೆ ಎಂದು ಜಿಲ್ಲಾ ವೈದ್ಯಾಧಿಕಾರಿ ಡಾ.ಶಂಕರ್ ನಾಯ್ಕ ತಿಳಿಸಿದ್ದಾರೆ.

ವಿಚಾರಣೆ ವೇಳೆ ಡಿಎಚ್‌ಒ ಡಾ.ಶಂಕರ್ ನಾಯ್ಕ್ ಮತ್ತು ಐ.ಎಂ.ಇ. ಅಧ್ಯಕ್ಷ ಡಾ.ಶ್ರೀನಿವಾಸ ಮತ್ತು ಡಾ.ಜಂಬಯ್ಯ ಅರ್.ಸಿ.ಹೆಚ್. ಮತ್ತು ತಾಲ್ಲೂಕು ಅರೋಗ್ಯಾಧಿಕಾರಿ ಡಾ.ಭಾಸ್ಕರ, ಕೆ.ಪಿ.ಎಂ.ಇ. ವಿಷಯ ನಿರ್ವಾಹಕ ಎಂ.ಧರ್ಮನಗೌಡ ಇತರರು ಇದ್ದರು.

ಎಲ್ಲಾ ಖಾಸಗಿ ವೈದರು ವಿದ್ಯಾರ್ಹತೆ ತಕ್ಕಂತೆ ಚಿಕಿತ್ಸೆ ನೀಡಬೇಕು. ಆಯುಷ್ಯ ವೈದರು ಅಲೋಪತಿ ಬಳಸಿದರೆ ಕಠಿಣ ಕ್ರಮ ಜರುಗಿಸಲಾಗುವುದು. ಎಲ್ಲಾ ಖಾಸಗಿ ವೈದರು ಮತ್ತು ಲ್ಯಾಬ್‌ಗಳು ಕಡ್ಡಾಯವಾಗಿ ಕೆ.ಪಿ.ಎಂ.ಇ ಯಲ್ಲಿ ನೋಂದಣಿ ಮಾಡಿಸಬೇಕು.
– ಎಂ.ಎಸ್.ದಿವಾಕರ ಅಧ್ಯಕ್ಷರು, ಕೆ.ಪಿ.ಎಂ.ಇ.ನೊಂದಣಿ ಮತ್ತು ಕುಂದುಕೊರತೆ ಸಕ್ಷಮಾ ಪ್ರಾಧಿಕಾರ.

ಅನಧಿಕೃತ ಕ್ಲಿನಿಕ್‌ಗಳ ವಿರುದ್ಧ ಇದೇ ಮೊದಲಬಾರಿಗೆ ಕ್ರಮ ಜರುಗಿಸಲಾಗಿದೆ. ಈಗಾಗಲೇ ನೋಟೀಸ್ ಪಡೆದುಕೊಂಡವರು ಮತ್ತು ಹೊಸದಾಗಿ ಕ್ಲಿನಿಕ್ ಆರಂಭಿಸುವವರು ಕೆಪಿಎಂಇ ನೋಂದಣಿ ಮಾಡಿಸಿಕೊಳ್ಳಬೇಕು. ತಪ್ಪಿದರೆ ಕಾನೂನು ಪ್ರಕಾರ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ.
– ಡಾ.ಶಂಕರನಾಯ್ಕ, ಡಿಎಚ್‌ಒ, ವಿಜಯನಗರ.


- Admissions
- Requirements
- Firm Branding
- Public Notice
- Change of Name

BOOK NOW!

Booking Open for Your Advertisements in Leading Local, State & National News Papers

9482599089 / 9448633038

- Obituary
- Remembrance
- Birthday wish ads
- Events Display &
- Classified ads

SHUBHA Ads C/o HAMPI TIMES, Bamboo Bazaar, Nr Valmiki Circle, Hosapete-583201 Vijayanagara Dist.

## ವಚನ ಅರಿವು

### ಅರಿವಿನ ಧರ್ಮ

**ಶೀಲವಂತನಾದಡೆ ಜಾತಿಯ ಬಿಡಬೇಕು.**
**ಶಿವಜ್ಞಾನಿಯಾದಡೆ ಸಮಯವ ಬಿಡಬೇಕು.**
**ಹೀಂಗಲ್ಲದೆ ಜಗದಲ್ಲಿ ನಡೆವ ಭ್ರಾಂತರ ಸುದ್ಧಿಯೇಕೆ**
**ನಿಭ್ರಾಂತನಾದ ಶರಣಂಗೆ ಅಮುಗೇಶ್ವರಾ?**

**– ಅಮುಗೆ ರಾಯಮ್ಮ**

ನೈತಿಕ ಆದರ್ಶ, ಮೌಲ್ಯಗಳನ್ನು ಅಳವಡಿಸಿಕೊಂಡವನು ಶೀಲವಂತನಾಗುತ್ತಾನೆ. ಹೀಗೆ ಶೀಲವಂತನಿಗೆ ಎಲ್ಲರೂ ಸಮಾನರು, ಮಾನವರಲ್ಲಿ ಭೇದಭಾವವಿಲ್ಲ, ಹೆಣ್ಣು ಗಂಡುಗಳಲ್ಲಿ ಭೇದಭಾವವಿಲ್ಲ. ಜಾತಿ–ವಿಜಾತಿಗಳಿಲ್ಲ ಎಂದು ನಂಬಿರಬೇಕು. ಲಿಂಗದೀಕ್ಷೆಯಾದ ಬಳಿಕ ಲಿಂಗದ ಮೂಲಕ ತನ್ನ ಅರಿವನ್ನು ಜಾಗೃತ ಮಾಡಿಕೊಂಡು ತನ್ನ ಆತ್ಮಜ್ಞಾನವನ್ನು ಪಡೆಯಬೇಕು. ಅರಿವು ಪಡೆದವರೇ ಶಿವಜ್ಞಾನಿಗಳಾಗುತ್ತಾರೆ. ಶಿವಜ್ಞಾನಿಗಳಾದ ಮೇಲೆ ಅವರಿಗೆ ಯಾವುದೇ ಧರ್ಮಗಳಿರುವುದಿಲ್ಲ. ಇರುವುದೊಂದೆ ಅರಿವಿನ ಧರ್ಮ. ಹೀಗೆ ಶೀಲ ಸಂಪಾದಿಸಿ, ಶಿವಜ್ಞಾನ ಪಡೆದವರು ಈ ಜಗತ್ತಿನ ಜೀವನದ ಜಂಜಾಟಗಳಲ್ಲಿ ಸಿಲುಕಿರುವ ಭ್ರಾಂತಿಗೊಳಗಾಗಿರುವವರ ಬಗ್ಗೆ ಚಿಂತಿಸಿ ತಾವು ಅವರಂತಾಗುವುದಿಲ್ಲ. ದೇಹ ಮನಸ್ಸಿಗೆ ಹಿಡಿದಿರುವ ಭ್ರಮೆಗಳನ್ನು ಅಳಿಸಿ ನಿಜ ಸುಖಿಗಳಾಗಿರುತ್ತಾರೆ. ಸಮಾಜಕ್ಕೆ ನಿಜ ಸುಖದ ದಾರಿಯನ್ನು ತೋರುತ್ತಾರೆ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ರಾಜ್ಯಕ್ಕೆ ಕೇಂದ್ರದ ಅನ್ಯಾಯ ವಿರೋಧಿಸುವುದು ತಪ್ಪೇ? ಸಿಎಂ ಪ್ರಶ್ನೆ

**ಹಂಪಿ ಟೈಮ್ಸ್ ಹರಿಹರ :**
ನವದೆಹಲಿಯಲ್ಲಿ ತೆರಿಗೆ ಹಂಚಿಕೆಯ ಬಗ್ಗೆ ರಾಜ್ಯದ ಪ್ರತಿಭಟನೆಯನ್ನುಮಾಜಿಮುಖ್ಯಮಂತ್ರಿಯಡಿಯೂರಪ್ಪವರು ಟೀಕಿಸಿರುವುದಕ್ಕೆ ಪ್ರತಿಕ್ರಯಿಸಿ, ರಾಜ್ಯಕ್ಕೆ ಕೇಂದ್ರದ ಅನ್ಯಾಯ ವಿರೋಧಿಸುವುದು ತಪ್ಪೇ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.



ಅವರು ಶುಕ್ರವಾರ ಹರಿಹರದಲ್ಲಿ ಕಾರ್ಯಕ್ರಮಕ್ಕೆ ತೆರಳುವ ಮುನ್ನ ಮಾಧ್ಯಮದ ವರೊಂದಿಗೆಮಾತನಾಡಿದರು.

ಮುಖ್ಯಮಂತ್ರಿಯಾಗಿದ್ದಾಗ ಯಡಿಯೂರಪ್ಪನವರು ಕೇಂದ್ರದ ವಿರುದ್ಧ ಧ್ವನಿ ಎತ್ತಲಿಲ್ಲ. ಕರ್ನಾಟಕದಿಂದ ನೀಡಲಾಗಿರುವ ತೆರಿಗೆಯನ್ನು ನಮಗೆ ನೀಡುತ್ತಿಲ್ಲ. 100 ರೂ.ಗೆ ಕೇವಲ 13 ರೂ. ರಾಜ್ಯಕ್ಕೆ ವಾಪಸ್ಸು ಬರುತ್ತಿದೆ. ರಾಜ್ಯದಿಂದ 4,30,000 ಕೋಟಿ ತೆರಿಗೆ ಬರುತ್ತಿದ್ದರೆ, ನಮಗೆ ಕೇವಲ 50,257 ಕೋಟಿ ರೂ.ಮಾತ್ರ ರಾಜ್ಯಕ್ಕೆ ಬರುತ್ತಿದೆ. ಕೇಂದ್ರದ ಈ ಧೋರಣೆಯನ್ನು ವಿರೋಧಿಸಲಾಗುತ್ತಿದೆ ಎಂದರು.

ರಾಜ್ಯಸರ್ಕಾರದಿಂದ 34 ಲಕ್ಷ ರೈತರಿಗೆ 650 ಕೋಟಿ ರೂ. ತಾತ್ಕಾಲಿಕ ಬರ ಪರಿಹಾರ

ಬರನಿರ್ವಹಣೆಗೆ ಸರ್ಕಾರದ ಕ್ರಮಗಳ ಬಗೆಗಿನ ಪತ್ರಕರ್ತರ ಪ್ರಶ್ನೆಗೆ ಉತ್ತರಿಸುತ್ತಾ, ಬರನಿರ್ವಹಣೆಯ ಕ್ರಮವಾಗಿ, ಕುಡಿಯುವ ನೀರು, ಮೇವು , ಉದ್ಯೋಗ ನೀಡಲಾಗುತ್ತಿದ್ದು, ಒಟ್ಟು 860 ಕೋಟಿ ರೂ.ಗಳನ್ನು ಎಲ್ಲ ಜಿಲ್ಲಾಧಿಕಾರಿಗಳಿಗೆ ನೀಡಲಾಗಿದೆ. ಜನರು ಗುಳೇ ಹೋಗದಂತೆ ತಪ್ಪಿಸಲು ಹಾಗೂ ಅವರ ಕುಡಿಯುವ ನೀರಿಗೆ ಯಾವುದೇ ತೊಂದರೆಯಾಗದಂತೆ ಕ್ರಮಕೈಗೊಳ್ಳಲು ಸ್ಪಷ್ಟ ನಿರ್ದೇಶನ ನೀಡಲಾಗಿದೆ. ತಾತ್ಕಾಲಿಕ ಪರಿಹಾರವಾಗಿ ಒಬ್ಬ ರೈತನಿಗೆ ತಲಾ 2000 ದಂತೆ ಸುಮಾರು 34 ಲಕ್ಷ ರೈತರಿಗೆ 650 ಕೋಟಿ ರೂ. ನೀಡಲಾಗಿದೆ. ಐದು ತಿಂಗಳು ಕಳೆದರೂ ಕೇಂದ್ರ ಸರ್ಕಾರ ಬರಪರಿಹಾರ ನೀಡಿಲ್ಲ. ರಾಜ್ಯದ ಬಿಜೆಪಿ ನಾಯಕರು ಕೇವಲ ಭಾಷಣ ಮಾಡುತ್ತಾರೆಯೇ ಹೊರತು, ಕೇಂದ್ರದೊಂದಿಗೆ ಸಂವಹಿಸಿ ಪರಿಹಾರ ದೊರಕಿಸಿ ಕೊಡುತ್ತಿಲ್ಲ ಎಂದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 9448633038

# ಪರೀಕ್ಷೆ ಭಯ ಬೇಡ ಸಂಭ್ರಮವಿರಲಿ



ಬೆಳೆಯುವ ಸಿರಿ ಮೊಳಕೆಯಲ್ಲಿ ನೋಡು ಎಂಬ ಹೇಳಿಕೆಯಂತೆ, ಓದು–ಅಭ್ಯಾಸ ಹೇಗಿರುತ್ತದೋ ಹಾಗೆ ಪರೀಕ್ಷೆಯಲ್ಲಿ ಫಲ ದೊರೆಯುತ್ತದೆ. ಆಮೆ–ಮೊಲದ ಕಥೆಯಂತೆ. ನಿಧಾನವಾಗಿಯಾದರೂ ಆಮೆ ತನ್ನ ಸತತ ಪ್ರಯತ್ನದಿಂದ ಗುರಿ ತಲುಪಿ ಯಶಸ್ಸು ಪಡೆಯುತ್ತದೆ. ಆದರೆ ಅವಸರವಸರದ ಸರಿಯಾಗಿ ಯೋಜನೆ ರೂಪಿಸಿದ, ಸೋಮಾರಿಯಾದ ಮೊಲ ಇನ್ನೂ ಕಾಲಾವಕಾಶವಿದೆ ಎಂದು ಮಧ್ಯ ದಾರಿಯಲ್ಲೆ ಮಲಗಿ ಸೋಲನ್ನು ಅನುಭವಿಸುತ್ತದೆ. ಇದನ್ನೆ ನಮ್ಮ ಮಕ್ಕಳ ಅಭ್ಯಾಸ – ಪರೀಕ್ಷೆಗೆ ಸರಿಯಾಗಿ ಹೋಲಿಕೆ ಕೊಡಬಹುದು.

ವಿದ್ಯಾರ್ಥಿಗಳ ಬದುಕಿನಲ್ಲಿ ಪರೀಕ್ಷೆ ಅತ್ಯಂತ ಮಹತ್ತರ ಘಟ್ಟ. ಇದೊಂದು ಕಲೆ ಇದ್ದಂತೆ. ವರ್ಷ ಪೂರ್ತಿ ಮಾಡಿದ ಸಾಧನೆಯನ್ನು, ಪ್ರತಿಭೆಯನ್ನು ಕೆಲವೇ ಘಂಟೆಗಳಲ್ಲಿ ಪ್ರದರ್ಶಿಸಬೇಕಾದ ಅನಿವಾರ್ಯತೆ ಇರುತ್ತದೆ. ಪರೀಕ್ಷೆಯಲ್ಲಿ ಎಷ್ಟು ಅಂಕ ಪಡೆಯುತ್ತಾರೆ? ಅಥವಾ ಎಷ್ಟನೇ ಸ್ಥಾನ ಪಡೆಯುತ್ತಾರೆ? ಎನ್ನುವುದು ಪರೀಕ್ಷೆಯನ್ನು ಹೇಗೆ ಎದುರಿಸ್ಮತ್ತಾರೆ? ಎನ್ನುವುದರ ಮೇಲೆ ನಿಂತಿರುತ್ತದೆ. ವರ್ಷ ಪೂರ್ತಿ ಪರೀಕ್ಷೆಗೆ ನಡೆಸಿದ ತಯಾರಿಗಿಂತಲೂ, ಪರೀಕ್ಷಾ ಸಮಯದಲ್ಲಿ ತೋರುವ ಪ್ರಜ್ಞೆ ಹಾಗೂ ಜಾಣ್ಮೆಗಳು ಭವಿಷ್ಯವನ್ನು ನಿರ್ಧರಿಸುತ್ತವೆ.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ, ಪೋಷಕರು ಕನಸಿನ ಗೋಪುರ ಕಟ್ಟಲು ಮಕ್ಕಳಮೇಲೆ ಅಂಕಗಳಿಗಾಗಿ ವಿಪರೀತ ಒತ್ತಡ ಹಾಕುತ್ತಾರೆ. ಇದರಿಂದ ವಿದ್ಯಾರ್ಥಿಗಳಲ್ಲಿ ಭಯ ಪ್ರಾರಂಭವಾಗುತ್ತದೆ. ಮಕ್ಕಳಿಗೆ ಪರೀಕ್ಷೆಗಳೆಂದರೆ ಏನೋ ಭಯ! ತೀರಾ ಗಾಬರಿಯಾಗಿ, ಬೆವೆತು, ಕೈಕಾಲು ನಡುಗಿ, ಪರೀಕ್ಷೆ ಬರೆಯದೇ ಹೊರಬರುತ್ತಾರೆ. ಇನ್ನು ಕೆಲವರು ಸರಿಯಾಗಿ ಬರೆದಿಲ್ಲ, ಫೇಲಾಗಬಹುದು ಎಂದು ಅನಾಹುತ ಮಾಡಿಕೊಳ್ಳುತ್ತಾರೆ. ಮನೋವಿಜ್ಞಾನಿಗಳ ಪ್ರಕಾರ ಪರೀಕ್ಷಾಭಯವು ಮಾನಸಿಕ ಪ್ರಕ್ರಿಯೆ. ಕೆಲವು ಸಂದರ್ಭದಲ್ಲಿ ಇದು ಸ್ವಾಭಾವಿಕ. ಮನಸ್ಸು ಮಾಡಿದಲ್ಲಿ ಈ ಭಯದಿಂದ ಮುಕ್ತರಾಗಬಹುದು. ಪರೀಕ್ಷೆ ಎಂಬುದು ಗಗನ ಕುಸುಮವೇನಲ್ಲ. ಅದು ನಮ್ಮ ಕೈಗೆಟುಕಲಾರದಂತಹುದೇನಲ್ಲ. ಅದೊಂದು ರೀತಿ ಮಕ್ಕಳಿಗೆಲ್ಲಾ ಹಗ್ಗದ ಹಾವು. ಹಾಗಾಗಿ ವಿದ್ಯಾರ್ಥಿಗಳು ಅದಕ್ಕೆ ಹೆದುರುವ ಅಗತ್ಯವೇ ಇಲ್ಲ.

ಪರೀಕ್ಷೆಯ ದಿನಗಳು ವಿದ್ಯಾರ್ಥಿಗಳು ತಮ್ಮ ಅಗ್ನಿ ಪರೀಕ್ಷೆ ಶುರುವಾಯಿತೆಂದು ಭಾವಿಸುತ್ತಾರೆ. ಈ ಅನಿಸಿಕೆ ಬುದ್ಧಿವಂತ ಮಕ್ಕಳನ್ನು ಬಿಟ್ಟಿಲ್ಲ. ಇದಕ್ಕೆ ಪ್ರಮುಖವಾದ ಕಾರಣಗಳೆಂದರೆ ಅವರಲ್ಲಿರುವ ಅಜ್ಞಾನ ಹಾಗು ಭಯ. ಸಂಬಂಧಪಟ್ಟಂತಹ ವಿಷಯದ ಸಂಪೂರ್ಣ ಮಾಹಿತಿ ಸಂಗ್ರಹಿಸಿಕೊಂಡಲ್ಲಿ ಯಾವ ಭಯ–ಭೀತಿ ಸಮೀಪವೂ ಸುಳಿವುದಿಲ್ಲ. ಹೆಚ್ಚು ಅಧ್ಯಯನ ಮಾಡಿದಷ್ಟು ಆತ್ಮವಿಶ್ವಾಸ ಹೆಚ್ಚುತ್ತದೆ.

ಒಂದಂತೂ ಸತ್ಯ, ಪರೀಕ್ಷೆಗಳಲ್ಲಿ ಶಿಕ್ಷಕರು ಹೇಳಿರುವುದು, ತಾವು ಕಲಿತಿರುವುದು, ಮನೆಯವರು ತಿಳಿಸಿರುವುದು, ಸ್ನೇಹಿತರೊಂದಿಗೆ ಚರ್ಚಿಸಿರುವುದು, ನಿಗದಿ ಪಡಿಸಿದ ಪಠ್ಯಕ್ರಮದಲ್ಲಿರುವುದನ್ನು ಬಿಟ್ಟು ಬೇರೇನು ಇರಲು ಸಾಧ್ಯವಿಲ್ಲ. ಇದನ್ನು ಮಕ್ಕಳು ಮೊದಲು ಸರಿಯಾಗಿ ಅರಿಯಬೇಕು. ಕೆಲವು ವಿಷಯಗಳಲ್ಲಿ ಮಾತ್ರ ಓದಿನ ವ್ಯಾಪ್ತಿ ವಿಶಾಲವಾಗಿರುತ್ತದೆ. ಇದರ ಜೊತೆಗೆ ಕೆಲವು ಮಹತ್ವದ ಅಂಶಗಳನ್ನು ಮಕ್ಕಳು ಮನದಟ್ಟುಮಾಡಿಕೊಳ್ಳಬೇಕು.

### ನಿಮ್ಮನ್ನು ಮೊದಲು ನೀವು ನಂಬಿರಿ:–

ಮನೋವಿಜ್ಞಾನಿಗಳ ಪ್ರಕಾರ ಪರೀಕ್ಷಾಭಯವು ಮಾನಸಿಕ ಪ್ರಕ್ರಿಯೆ. ಕೆಲವು ಸಂದರ್ಭದಲ್ಲಿ ಇದು ಸ್ವಾಭಾವಿಕ. ಮನಸ್ಸು ಮಾಡಿದಲ್ಲಿ ಈ ಭಯದಿಂದ ಮುಕ್ತರಾಗಬಹುದು. ವಿದ್ಯಾರ್ಥಿಗಳಿಗೆ ತಮ್ಮ ಓದು–ಬರಹ–ಅಭ್ಯಾಸದ ಬಗ್ಗೆ ನಂಬಿಕೆ ಇದ್ದರೇ ಅದೇ ಅವರನ್ನು ಅರ್ಧದಾರಿಗೆ ಕೊಂಡೊಯ್ಯುತ್ತದೆ. ಆಂಜನೇಯನಂತೆ ಅವರ ಬಗ್ಗೆ ಇನ್ನೊಬ್ಬರು ಹೇಳುವವರೆಗೂ ಮಕ್ಕಳಿಗೆ ತಮ್ಮ ಮೇಲೆ ಭರವಸೆ ಇರುವುದಿಲ್ಲ.





**ಡಾ.ಪರಮೇಶ್ವರಯ್ಯ ಸೊಪ್ಪಿಮಠ**
**ಶಿಕ್ಷಕರು**
soppi.mata@gmail.com

ಮೊದಲು ವಿದ್ಯಾರ್ಥಿಗಳು ತಮ್ಮ ಮೇಲೆ ವಿಶ್ವಾಸ ಇಡುವುದನ್ನು ಕಲಿಯಬೇಕು.

### ವಿಶ್ರಾಂತಿ–ಮನೋರಂಜನೆ ಇರಲಿ:–

ಪರೀಕ್ಷೆ ಹತ್ತಿವಾದಂತೆ ವಿದ್ಯಾರ್ಥಿಗಳು ಯಾವ ಆಟ, ಊಟ, ಸಿನೆಮಾ, ಹಬ್ಬಗಳ ಕಡೆ ಕಣ್ಣೆತ್ತಿಯೂ ನೋಡುವುದಿಲ್ಲ. ಆ ಸಮಯದಲ್ಲಿ ಲೋಕದ ಸಂಪರ್ಕವನ್ನೆಲ್ಲಾ ಕಡಿದುಕೊಂಡು, ಒಂದು ಕೊಠಡಿಗೆ ಸೀಮಿತವಾಗಿ ತಮ್ಮನ್ನು ತಾವೇ ಬಂಧಿಸಿಟ್ಟುಕೊಳ್ಳುತ್ತಾರೆ. ಆ ರೀತಿಯ ವರ್ತನೆಯಿಂದ ಲಾಭಕ್ಕಿಂತ ನಷ್ಟವೇ ಹೆಚ್ಚು. ಜೊತಗೆ ಅಗತ್ಯವಿದ್ದಷ್ಟು ವಿಶ್ರಾಂತಿ ಪಡೆಯುವುದನ್ನು ಮರೆಯಬಾರದು.

### ಬರವಣಿಗೆಗೆ ಆದ್ಯತೆ ನೀಡಿರಿ:–

ಪರೀಕ್ಷೆಗಳಲ್ಲಿ ಎಲ್ಲರಿಗಿಂತ ಭಿನ್ನ ರೀತಿಯ, ವಿಭಿನ್ನ ಶೈಲಿಯ ಉತ್ತರಗಳನ್ನು ಮಕ್ಕಳು ಬರೆದಲ್ಲಿ ಮೌಲ್ಯಮಾಪಕರ ಮನ ಸೆಳೆದು ಹೆಚ್ಚು ಅಂಕಗಳು ಬರುತ್ತವೆ. ಇಲ್ಲಿ ನಾವು ಗಮನಿಸಬೇಕಾದುದೆಂದರೆ, ಪರೀಕ್ಷೆಯಲ್ಲಿ ಎಲ್ಲರೂ ಉತ್ತರ ಬರೆಯುತ್ತಾರೆ. ಆದರೆ ಎಲ್ಲರಿಗೂ ಒಂದೇ ತರನಾದ ಅಂಕಗಳು ಬರುವುದಿಲ್ಲ. ಅದಕ್ಕೆ ಕಾರಣ ಅವರು ಉತ್ತರ ಬರೆವ ವಿಧಾನ.

ಅನೇಕರಿಗೆ ಸರಿಯಾದ ಉತ್ತರ ಗೊತ್ತಿರುತ್ತದೆ. ಅದನ್ನು ಬರೆಯಲು ಬಳಸುವ ಪದಗಳು, ಹೇಳುವ ರೀತಿ, ವೈವಿಧ್ಯತೆಗಳಲ್ಲಿ ಹಿಂದೆ ಬೀಳುತ್ತಾರೆ. ಸರಿಯಾದ ವಾಕ್ಯರಚನೆ ಮಾಡಲು ಸಾಧ್ಯವಾಗದು. ಅದರ ಪರಿಣಾಮ ಹತ್ತು ಅಂಕದ ಪ್ರಶ್ನೆಗೆ ಸಿಗುವುದು ಕೇವಲ ಎರಡು ಮೂರಂಕಗಳು ಮಾತ್ರ. ಚಿಕ್ಕ ಉತ್ತರ ನಿರೀಕ್ಷಿಸುವ ಪ್ರಶ್ನೆಗಳಿಗೆ ದೀರ್ಘ ಉತ್ತರದ ಅವಶ್ಯಕತೆ ಇರುವುದಿಲ್ಲ. ಅದು ಕೂಡ ಅಂಕಗಳನ್ನು ಕಡಿತ ಮಾಡಿಸುತ್ತದೆ. ಅದಕ್ಕೆ ಪ್ರಶ್ನೆಪತ್ರಿಕೆಯಲ್ಲಿ ಹೇಳಿದಷ್ಟನ್ನು, ಹೇಳಿದ ರೀತಿಯಲ್ಲಿ ಬರೆಯಬೇಕು. ಅವಕಾಶವಿದ್ದಲ್ಲಿ ವಿದ್ಯಾರ್ಥಿಗಳು ತಮ್ಮ ಪ್ರತಿಭೆ ತೋರಿಸಲು ಹಿಂಜರಿಯಬಾರದು.

### ಇಂಟರ್‌ನೆಟ್ ಬಳಸಿಕೊಳ್ಳಿ:–

ಮಕ್ಕಳು ಪಠ್ಯಪುಸ್ತಕವನ್ನು ಸಂಪೂರ್ಣವಾಗಿ ಓದಿದ್ದರೆ ಖಂಡಿತವಾಗಿ ಹೆಚ್ಚು ಅಂಕಗಳಿಸಿ ಯಶಸ್ಸನ್ನು ಸಾಧಿಸುತ್ತಾರೆ. ಪರೀಕ್ಷೆಗೆ ಬರೀ ಓದಿದರಷ್ಟೆ ಸಾಲದು. ಬರೆಯುವ ವಿಶಿಷ್ಟ ತಂತ್ರಗಳನ್ನು ಕರಗತ ಮಾಡಿಕೊಳ್ಳಬೇಕು. ಅದಕ್ಕೆ ಮಕ್ಕಳು ಪರೀಕ್ಷೆಗೆ ಹೇಗೆ ಸಿದ್ಧಗೊಳ್ಳಬೇಕು? ಹೆಚ್ಚಿನ ಅಂಕಗಳನ್ನು ಗಳಿಸಲು ಅಳವಡಿಸಿಕೊಳ್ಳ ಬಹುದಾದ ತಂತ್ರಗಳು ಯಾವುವು? ಇತರೆ ವಿದ್ಯಾರ್ಥಿಗಳಿಗಿಂತ ಹೇಗೆ ಭಿನ್ನವಾಗಿ ಗುರುತಿಸಿಕೊಳ್ಳ ಬಹುದು? ಅತ್ಯುತ್ತಮ ವಿದ್ಯಾರ್ಥಿ ಎನಿಸಿಕೊಳ್ಳಬೇಕಾದರೆ ಯಾವ ರೀತಿ ನಿಯಮಗಳನ್ನು ಪಾಲಿಸಬೇಕು? ಈ ರೀತಿಯಾಗಿ ಪರೀಕ್ಷಾ ಸಿದ್ಧತೆಗಾಗಿ ನೆರವು ನೀಡಲು 5 ಕೋಟಿಗೂ ಹೆಚ್ಚು ವೆಬ್‌ಸೈಟ್‌ಗಳು ಕಾದು ನಿಂತಿವೆ ಎಂದರೆ ಸಹಜವಾಗಿ ಅಚ್ಚರಿ ಎನಿಸುತ್ತದೆ. ಆದರೂ ಸತ್ಯ. ಅದರಲ್ಲಿ ಮಾಹಿತಿಗಳ ಕಣಜವೇ ಅಡಗಿದೆ. ಛಾಯಾ ಚಿತ್ರಗಳೂ ಲಭ್ಯವಿವೆ. ವಿಡಿಯೋ ತುಣುಕುಗಳನ್ನೂ ನಾವು ಕಾಣಬಹುದಾಗಿದೆ.

ಶಾಲಾ ಪರೀಕ್ಷಾ ಸಿದ್ಧತೆಯ ತಾಣಗಳನ್ನು ಹುಡುಕಬೇಕಾದಲ್ಲಿ, www.google.com, ಸರ್ಚ್ ಇಂಜಿನ್ನಿನಲ್ಲಿ school examination technique ಎಂದು ಟೈಪ್ ಮಾಡಿ ಹುಡುಕಿ ನೋಡಿ.

### ಅಡ್ಡದಾರಿಗಳು ಯಶಸ್ಸು ನೀಡುವುದಿಲ್ಲ:–

ಪರೀಕ್ಷೆಯಲ್ಲಿ ಉತ್ತಮ ಸಫಲತೆಯು ಆತ್ಮವಿಶ್ವಾಸದಿಂದ ದೊರೆಯುತ್ತದೆ. ಕಾಪಿ ಹೊಡೆಯುವಂತ ಅನೈತಿಕ ಮಾರ್ಗಗಳಿಂದ ಯಶಸ್ಸು ಸಿಗುವುದಿಲ್ಲ. ಹಾಗಾಗಿ ನಕಲು ಹೊಡೆಯುವುದರ ಹಿಂದೆ ಹೋಗಿ ಖಾಲಿ ಕೈಗಳಿಂದ ಮರಳುವ ಬದಲು, ವ್ಯವಸ್ಥಿತವಾಗಿ–ನಿಯಮಿತವಾದ ಓದನ್ನು ಅನುಸರಿಸಿ ಯಶಸ್ಸು ಕಾಣಬಹುದು. ಸಫಲತೆ ಹಾಗು ಆತ್ಮ ವಿಶ್ವಾಸಗಳು ಒಂದೇ ನಾಣ್ಯದ ಎರೆಡು ಮುಖಗಳಿದ್ದಂತೆ.

### ಮುಗಿಸುವ ಮುನ್ನ:–

ಗುರಿಯನ್ನು ತಲುಪಲು ಅನೇಕ ಸಮಸ್ಯೆಗಳು ಎದುರಾಗುತ್ತವೆ. ಅವನ್ನು ಧೈರ್ಯ ಮತ್ತು ಉತ್ಸಾಹದಿಂದ ಎದುರಿಸಬೇಕು. ಸಕಾರಾತ್ಮಕ ಯೋಚನೆಗಳು ನಿಮ್ಮ ಸಾಮರ್ಥ್ಯವನ್ನು ಹೆಚ್ಚಿಸುತ್ತ, ಸಮಸ್ಯೆಯನ್ನು ಬಿಡಿಸುವ ಶಕ್ತಿ ವೃದ್ಧಿಸುತ್ತವೆ. ಕಷ್ಟ ಪಟ್ಟು ಅಭ್ಯಾಸ ಮಾಡಿ. ಅಭ್ಯಾಸಕ್ಕೆ ನಿಮ್ಮನ್ನು ಅರ್ಪಿಸಿಕೊಳ್ಳಿ. ನೋವನ್ನು ಅನುಭವಿಸದೇ ಸಾಧನೆ ಮಾಡಲಾಗದು. ಕಷ್ಟವನ್ನು ಸಹಿಸಿಕೊಂಡು ಮುನ್ನುಗ್ಗಿರಿ ಮುಂದೆ ಸಂತಸ ಕಾಯುತ್ತಿರುತ್ತದೆ. ಪರೀಕ್ಷೆಯನ್ನು ಹಬ್ಬದಂತೆ ಸ್ವಾಗತಿಸಿ, ಸಂಭ್ರಮಿಸಿ ಅದು ಖಂಡಿತ ಖುಷಿ ಕೊಡುತ್ತದೆ.

# ಯಾವುದೇ ಕಾರಣಕ್ಕೂ ಗ್ಯಾರಂಟಿಗಳು ಸ್ಥಗಿತವಾಗುವುದಿಲ್ಲ

## ಜಾತಿ ವ್ಯವಸ್ಥೆ ಬೇರೂರಲು ವೈಚಾರಿಕ ಶಿಕ್ಷಣದ ಕೊರತೆ ಕಾರಣ ಎಂದ ಮುಖ್ಯಮಂತ್ರಿ ಸಿದ್ದರಾಮಯ್ಯ । ಭಗೀರಥ ಮಹೋತ್ಸವ

**ಹಂಪಿ ಟೈಮ್ಸ್ ದಾವಣಗೆರೆ**
ಜಾತಿ ವ್ಯವಸ್ಥೆ ಬೇರೂರಲು ವೈಚಾರಿಕ ಶಿಕ್ಷಣದ ಕೊರತೆ ಕಾರಣ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಇಂದು ದಾವಣಗೆರೆಯಲ್ಲಿ ಜಗದ್ಗುರು ಶ್ರೀ ಡಾ: ಪುರುಷೋತ್ತಮಾನಂದಪುರಿ ಮಹಾಸ್ವಾಮಿಗಳ ಪಟ್ಟಾಭಿಷೇಕ ರಜತ ಮಹೋತ್ಸವ ಮತ್ತು ರಾಷ್ಟ್ರೀಯ ಭಗೀರಥ ಮಹೋತ್ಸವ ಹಾಗೂ ಉಪ್ಪಾರರ ಬೃಹತ್ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಚಲನರಹಿತವಾದ ಜಾತಿ ವ್ಯವಸ್ಥೆ ಬಲವಾಗಿ ಬೇರು ಬಿಟ್ಟಿರುವುದರಿಂದ ಬದಲಾವಣೆ ತರಲು ಇಂದಿಗೂ ಸಾಧ್ಯವಾಗಿಲ್ಲ. ದಾರ್ಶನಿಕರ ಪ್ರಯತ್ನದಿಂದಾಗಿ ಸ್ವಲ್ಪ ಸರಿಹೋಗುವ ಜಾತಿ ವ್ಯವಸ್ಥೆ ಮತ್ತೆ ಯಥಾಸ್ಥಿತಿಗೆ ಮರಳುತ್ತದೆ. ಬಸವಾದಿ ಶರಣರು' ಇವನಾರವ, ಎನ್ನದೇ ಇವ ನಮ್ಮವ ಎಂದು ಭಾವಿಸುವಂತೆ ಹೇಳಿದ್ದರು ಎಂದರು.

ಆರ್ಥಿಕ, ಸಮಾಜಿಕ ಅಸಮಾನತೆ ನಮ್ಮ ದೇಶದ ಜಾತಿ ವ್ಯವಸ್ಥೆ ಕಾರಣ ಉಪ್ಪಾರರು ಆರ್ಥಿಕವಾಗಿ , ಸಮಾಜಿಕವಾಗಿ ಹಿಂದುಳಿದಿರುವ ಸಮಾಜ. ಉಪ್ಪು ತಯಾರಿಸಿ ಮಾರಾಟ ಮಾಡುವ ವೃತ್ತಿಯಾಗಿದ್ದು, ಕೈಗಾರೀಕರಣವಾದ ನಂತರ ಅವರ ವೃತ್ತಿ ಬಿಡಬೇಕಾದ ಪರಿಸ್ಥಿತಿ ಉಂಟಾಗಿದೆ. ಇವರ ಕಸುಬಿಗೆ ಧಕ್ಕೆಯುಂಟಾದ ಮೇಲೆ ಸಮಾಜ ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದಿದೆ. ಶಿಕ್ಷಣ, ಆರ್ಥಿಕ ಶಕ್ತಿಯಿಂದ ವಂಚಿತರಾಗಿ ಉದ್ಯೋಗವಿಲ್ಲದೇ ಕೂಲಿ ಮಾಡುವ ಸ್ಥಿತಿ ಉಂಟಾಯಿತು. ಆದರೆ ಉಪ್ಪಾರ ಸಮಾಜ ಮಹಾತ್ಮಾ ಗಾಂಧಿಜಿಯವರು ಬ್ರಿಟಿಷರ ವಿರುದ್ಧ ಹೋರಾಡುವಾಗ ಉಪ್ಪಿನ ಸತ್ಯಾಗ್ರಹ



ಮಾಡಿದರು ಅದರಲ್ಲಿ ಉಪ್ಪಾರರ ಕೊಡುಗೆಯೂ ಅಪಾರವಾಗಿತ್ತು ಎಂದರು.

ಜಾತಿ ವ್ಯವಸ್ಥೆಯ ಕಾರಣದಿಂದ ಅಕ್ಷರ ಸಂಸ್ಕೃತಿಯಿಂದ ಎಲ್ಲಾ ಶೂದ್ರರೂ ವಂಚಿತರಾಗಿದ್ದಾರೆ. ಆರ್ಥಿಕ, ಸಮಾಜಿಕ ಅಸಮಾನತೆ ಇದ್ದರೆ ಅದಕ್ಕೆ ನಮ್ಮ ದೇಶದ ಜಾತಿ ವ್ಯವಸ್ಥೆ ಕಾರಣ. ಸಂವಿಧಾನದಲ್ಲಿ ಸಮ ಸಮಾಜ ನಿರ್ಮಾಣವಾಗಬೇಕೆಂದು ಹೇಳಿದೆ. ಶೋಷಣೆಗೊಳಗಾದ ಜನರಿಗೆ ಆರ್ಥಿಕ, ಸಮಾಜಿಕ ಶಕ್ತಿ ತುಂಬಿದಾಗ ಮಾತ್ರ ಸಮಸಮಾಜ ನಿರ್ಮಾಣ ಸಾಧ್ಯ ಎಂದರು.

**ಒಂದೇ ಜಾತಿ, ಒಂದೇ ಮತ, ಒಂದೇ ದೇವರು ಎಂದು ನಾರಾಯಣಗುರು:**

ಬಸವಾದಿ ಶರಣರು ಕರ್ಮಸಿದ್ಧಾಂತವನ್ನು ವಿರೋಧಿಸಿದರು. ನನಗೆ ಕಾನೂನು ಶಿಕ್ಷಣ ಪಡೆದು, ವಕೀಲನಾಗಿ, ಈಗ ಮುಖ್ಯಮಂತ್ರಿಯಾಗುವ ಅವಕಾಶವನ್ನು ಅಂಬೇಡ್ಕರ್ ರವರ ಸಂವಿಧಾನ ನೀಡಿತು. ಶ್ರೀಮಠವು ಸಮುದಾಯದ ವಿದ್ಯಾರ್ಥಿಗಳಿಗೆ ಶಿಕ್ಷಣಕ್ಕೆ ಇಂಬು ನೀಡುತ್ತಿರುವುದು ಶ್ಲಾಘನೀಯ.

ಒಂದೇ ಜಾತಿ, ಒಂದೇ ಮತ, ಒಂದೇ ದೇವರು ಎಂದು ನಾರಾಯಣಗುರುಗಳು ಬೋಧಿಸಿದರು. ಮನುಷ್ಯ ಮನುಷ್ಯರನ್ನು ಪ್ರೀತಿಸಬೇಕು ಎಂದು ಬಸವಣ್ಣನವರು ಪ್ರತಿಪಾದಿಸಿದರು ಎಂದರು.

**ಶ್ರೇಷ್ಠತೆ ಜಾತಿಯಿಂದಲ್ಲ, ಶಿಕ್ಷಣದಿಂದ ಬರುತ್ತದೆ :**

ಸಮುದಾಯಗಳು ಸೂಕ್ತರೀತಿಯಲ್ಲಿ ಅಭಿವೃದ್ಧಿಹೊಂದಬಾರದೆಂಬ ಉದ್ದೇಶದಿಂದ ದಾರಿ ತಪ್ಪುಸುವವರು ಬಹಳಷ್ಟಿದ್ದಾರೆ. ಚರಿತ್ರೆ ತಿಳಿದಿರುವವರು ಮಾತ್ರ ಭವಿಷ್ಯ ನಿರ್ಮಿಸಲು ಸಾಧ್ಯ. ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಶಕ್ತಿ ತುಂಬಿದಾಗ ಮಾತ್ರ ದೇಶಕ್ಕೆ ಬಂದ ಸ್ವಾತಂತ್ರ್ಯ ಸಾರ್ಥಕವಾಗುತ್ತದೆ. ಶ್ರೇಷ್ಠತೆ ಎಂಬುದು ಜಾತಿಯಿಂದ ಬರುವುದಲ್ಲ. ಅದು ನಮ್ಮ ಶಿಕ್ಷಣ,ಪರಿಶ್ರಮದಿಂದ ಬರುತ್ತದೆ ಎಂದರು.

**ಯಾವುದೇ ಕಾರಣಕ್ಕೂ ಗ್ಯಾರಂಟಿಗಳು ಸ್ಥಗಿತವಾಗುವುದಿಲ್ಲ:**

ತಳಮಟ್ಟದ ಜನರಿಗೆ ಉಪಯೋಗವಾಗುವ ಗ್ಯಾರಂಟಿ ಯೋಜನೆಗಳನ್ನು ಕೆಲವರು ಟೀಕಿಸಿದರು. ಆದರೆ ರಾಜ್ಯದ 150 ಕೋಟಿ ಮಹಿಳೆಯರು ಜೂನ್ 11 ರಿಂದ ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣಿಸಿದ್ದಾರೆ. ಇಂತಹ ಜನಪರ ಯೋಜನೆಗಳ ಬಗ್ಗೆ ಇಚ್ಚಾಶಕ್ತಿ ತೋರದ ಪಕ್ಷಗಳು, ಮೊದಲಿಗೆ ಯೋಜನೆಗಳನ್ನು ಜಾರಿ ಮಾಡಿ ನಂತರ ಸ್ಥಗಿತಗೊಳಿಸುತ್ತಾರೆ ಎಂದು ಟೀಕಿಸುತ್ತಾರೆ.ಆದರೆ ಈ ಯೋಜನೆಗಳನ್ನು ಯಾವುದೇ ಕಾರಣಕ್ಕೂ ನಿಲ್ಲಿಸುವುದಿಲ್ಲ ಎಂದು ಸ್ಪಷ್ಟ ಪಡಿಸಿದರು. ರಾಜ್ಯದ 4.5 ಕೋಟಿ ಜನರಿಗೆ ಗ್ಯಾರಂಟಿ ಯೋಜನೆಗಳು ತಲುಪುತ್ತಿವೆ ಎಂದರು.

ಭರವಸೆ: ಉಪ್ಪಾರ ಸಮಾಜಕ್ಕೆ ಜಗದ್ಗುರು ಶ್ರೀ ಡಾ: ಪುರುಷೋತ್ತಮಾನಂದಪುರಿ ಮಹಾಸ್ವಾಮಿಗಳು ಬಹಳಷ್ಟು ಕೆಲಸಗಳನ್ನು ಮಾಡಿದ್ದು, ಸರ್ಕಾರದ ವತಿಯಿಂದ ಭಗೀರಥ ಜಯಂತಿ ಆಚರಣೆ ಹಾಗೂ ಭಗೀರಥ ಮಂಡಳಿ ಸ್ಥಾಪನೆಯಾಗಿದ್ದರೆ ಅದಕ್ಕೆ ಸ್ವಾಮೀಜಿಯವರು ಕಾರಣ ಎಂದರು. ಸಂಸ್ಥೆಗೆ ಸ್ವಾಮೀಜಿಗಳ ಜಮೀನು ಕೊಡಬೇಕೆಂಬ ಮನವಿಗೆ ಸ್ಪಂದಿಸಿ ಸಂಬಂಧಪಟ್ಟವರೊಂದಿಗೆ ಚರ್ಚಿಸಿ ತೀರ್ಮಾನ ಮಾಡಲಾಗುವುದು ಎಂದು ಉಭರವಸೆ ನೀಡಿದರು.

ಜಗದ್ಗುರು ಶ್ರೀ ಡಾ: ಪುರುಷೋತ್ತಮಾನಂದಪುರಿ ಮಹಾಸ್ವಾಮಿ, ಅಧ್ಯಕ್ಷತೆ ವಹಿಸಿದ್ದ ಮಾಜಿ ಸಚಿವರು ಹಾಗೂ ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಸಂಸ್ಥೆಯ ಅಧ್ಯಕ್ಷ ಪುಟ್ಟರಂಗಶೆಟ್ಟಿ, ಸಚಿವರಾ ಕೆ.ಹೆಚ್. ಮುನಿಯಪ್ಪ , ಸತೀಶ್ ಜಾರಕೀಹೊಳಿ, ಉಸ್ತುವಾರಿ ಸಚಿವ ಡಾ: ಕೆ. ಸುಧಾಕರ್ , ಶಾಸಕರಾದ ಗೋವಿಂದಪ್ಪ, ಶ್ರೀನಿವಾಸ್, ಪುಟ್ಟಸ್ವಾಮಿ ಗೌಡ, ಮಾಜಿ ಸಂಸದ ಚಂದ್ರಪ್ಪ, ಉಪ್ಪಾರ ಸಮಾಜದ ಮುಖಂಡರು,ಸಾಲುಮರದತಿಮ್ಮಕ್ಕಉಪಸ್ಥಿತರಿದ್ದರು.

## ಕವಿ ಮನಸು

### ನಂಬಿಕೆಯೇ ದೇವರು



ನಾವು ಮಾಡುವ ಒಳಿತು
ನಮ್ಮನು ಪೊರೆಯುವುದು.
ನಾವು ಬಯಸಿದರೆ ಕೆಡುಕು
ನಮ್ಮನ್ನೇ ನೋಯಿಸಿ ಕಾಡುವುದು ಎಂಬ
ನಂಬಿಕೆ.
ಧರ್ಮ ಮಾರ್ಗದಲ್ಲಿ ನಡೆಯುವಂತೆ
ಮಾಡುವ ರೀತಿಯಲ್ಲವೇ ದೇವರು.
ನೀತಿಯೊಂದಿಗೆ ಬದುಕಲು ಹೇಳಿಕೊಟ್ಟ
ಗುರು-ಹಿರಿಯರು, ತಂದೆ-ತಾಯಿಯರ
ಮಾತಿನ ಮೇಲೆ ಇದ್ದರೆ ನಂಬಿಕೆ.
ಹೇಗೆ ತಾನೇ ಪ್ರಶ್ನೆ ಮೂಡಲು ಸಾಧ್ಯ?
ದೇವರ ಇರುವಿಕೆ ಮೇಲೆ ಅಪನಂಬಿಕೆ.
ನಂಬಿ ಕೆಟ್ಟವರಿಲ್ಲವೋ!!
ನಂಬದೆ ಬದುಕಲು ಸಾಧ್ಯವೇ?

**– ಮಂಜುಶ್ರೀ ಮುರಳೀಧರ್.**
ತೋರಣಗಲ್ಲು, ಬಳ್ಳಾರಿ.

### ಎಲ್ಲೋ ಯುದ್ಧ

ಪಕ್ಕದ ಊರಲಿ ಸುರಿದರೆ ಜಡಿಮಳೆ
ಎಲ್ಲೆಡೆ ಛತ್ರಿಯ ಹಿಡಿಯುವುದೇತಕೆ
ಒಗಟಿದು ಎನಿಸಲು ತೊಡಗಿದೆ ಈ ಇಳೆ
ಗೋಜಲು ಮನವಿದು ನನ್ನೊಳಗೇತಕೆ

ಸಕಲವು ತನ್ನದೆ ಎನಿಸುವ ಭಾವಕೆ
ಎಲ್ಲವ ಕೈವಶಗೊಳಿಸುವ ಹವಣಿಕೆ
ತೋಳನು ಏರಿಸಿ ಇಳಿವರು ಸಮರಕೆ
ಪರರಿಗೆ ತೊಂದರೆ ಕೊಡುವುದು ಏತಕೆ

ಎಲ್ಲೋ ಯುದ್ಧವು ನಡೆಯುವ ಕಾರಣ
ಬೆಲೆಗಳ ಏರಿಕೆಗಿಲ್ಲ ನಿಯಂತ್ರಣ
ಉಳ್ಳವರೆಂತೋ ಕೊಳ್ಳುವರಾದರೆ
ಬಡವರ ಬಾಳಿಗೆ ಎಲ್ಲಿದೆ ಆಸರೆ॥

**– ಪೆರ್ಮುಖ ಸುಬ್ರಹ್ಮಣ್ಯ ಭಟ್**

### ತುಂಗಭದ್ರಾ ನೀರಿನ ಮಟ್ಟ



**ಶುಕ್ರವಾರ: 09-02-2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1588.04 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 87 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 9.469 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

**ಕಳೆದ ವರ್ಷ ಇದೇ ದಿನ**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1613.34 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 9293 ಕ್ಯುಸೆಕ್ |
| ಸಾಮರ್ಥ್ಯ | 44.595 ಟಿಎಂಸಿ |

### ಒದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಮನಸ್ಸಿನ ಅಂಗಳದಲ್ಲಿ ಕನಸಿನ ಹೂವು ಅರಳಲಿ

ಇಂದು ಅನೇಕ ವ್ಯವಸ್ಥೆಗಳ ಬದಲಾವಣೆಯಲ್ಲಿ ಕನಸುಗಳಿಗೆ ಸ್ವಾತಂತ್ರ್ಯವೇ ಸಿಗದಂತಾಗಿದೆ, ವಿವಿಧ ಕಲುಷಿತ ವಾತಾವರಣದಲ್ಲಿ , ದ್ವೇಷ ಅಸೂಯೆ , ಕ್ರೌರ್ಯ ,ಮೋಸ ವಂಚನೆಗಳ ಬಯಲಾಟದಲಿ ಬದುಕು ಬಾಳ ಬಂಡಿಚಕ್ರ ನಿಂತು ಹೋಗುವಂತಾಗಿದೆ. ಸುಂದರ ಸೌಂದರ್ಯದ ಕನಸಿಗೆ 'ಮನುಸ್ಸು' ಬಹಳ ಪ್ರಮುಖ ಪಾತ್ರ ವಹಿಸಬೇಕಾಗುತ್ತದೆ. ಈ ಬದುಕಿನಲ್ಲಿ ಅಕ್ಷರ ,ಅನ್ನ, ವಸತಿ ಸಮಸ್ಯೆಗಳ ರೌದ್ರ ಚಿತ್ರ ಬರೆಯುತ್ತಿದೆ. ಮಕ್ಕಳ ಬಾಲ್ಯದ ಬೆಳವಣಿಗೆಯಲ್ಲಿ ಸುಖ ಕಾಣದೆ ಆಧುನಿಕ ಒತ್ತಡಗಳಲ್ಲಿ ಬಾಲ್ಯವೇ ಬಲಿಯಾಗುತ್ತದೆ. ಪರದೇಶಿಗೆ ಅದೃಷ್ಟವೆಂಬುದು ಸಿಗದೇ ಕವಲು ಹೊಡೆಯುತ್ತದೆ. ಮನೆಯೆ ಇಲ್ಲದ ಪಾಪಿಗೆ ಅದೃಷ್ಟದ ಕದವೆಂಬ ಮಾತು ಬಹು ದೂರದ ಮಾತಾಗಿದೆ. ಗುರು , ಗುರಿ ಎರಡು ಹಣದ ಮೂಸೆಗಳಲ್ಲಿ ಸಿಲುಕಿದೆ.

ನಮ್ಮಲ್ಲಿ ನಂಬಿಕೆ ವಿಶ್ವಾಸದ ರಹ ದಾರಿಯಲ್ಲಿ ನಿತ್ಯ ಪ್ರಯತ್ನದ ಕನಸುಗಳ ಕುದುರೆ ಏರಿ ಮುನ್ನಡೆದಾಗ ಬದುಕು ಗುರಿ ಮುಟ್ಟಲು ಸಾಧ್ಯ, ಆದರೆ ಇಂದು ವಿಷಮ ಸ್ಥಿತಿಯಲ್ಲಿ ಅಬಲನು ಪ್ರಬಲನು ಆಗುವುದು ಯಾವಾಗ? ಹಣ ಅಧಿಕಾರ ಅಂತಸ್ತು ಸಾಧನೆ ಇಂದೇ ಬಿದ್ದು ಭ್ರಮಲೋಕದಲ್ಲಿ ಓಡುತ್ತಿದ್ದೇವೆ .ಕೆಟ್ಟ ಕನಸುಗಳ ದಟ್ಟ ಅರಣ್ಯದಲ್ಲಿ ಹೊರಬರಲಾರದೆ ಕಪ್ಪು ನಾಡಿನಲ್ಲೇ ಕಾಣದೆ ಮಾಯವಾಗುವ ಜನರೇ ಬಹಳಷ್ಟು ಜನ ಇದ್ದಾರೆ .ಇನ್ನು ಸಮಾಜದಲ್ಲಿ ಸುಳ್ಳು ಕನಸುಗಳಿಗೆ ಮೋಹಕ ತಾರೆಗಳಾಗಲು ಸುಳ್ಳು ಕನಸುಗಳನ್ನೇ ಬಿತ್ತಿ ಕಳ್ಳ ದಾರಿ ತೋರಿಸಿ ಅಪರಾಧ ಲೋಕದಲಿ ಬೆಳಕು ಹುಡುಕುವುದು ಎಷ್ಟು ಸರಿ. ಕುರುಡನಿಗೆ ಕುರುಡತನವೇ ದೊಡ್ಡ ಕತ್ತಲಾಗಿರುವಾಗ ಅದರಲ್ಲಿ ಪ್ರಕೃತಿಯೆ ಕಗ್ಗತ್ತಲು ಉಂಟುಮಾಡಿದೆ. ಇದರಲ್ಲಿ ಸಮಾಜಕ್ಕೆ ಆತಂಕವೇ ಕಾದಿದೆ, ಸತ್ಯ ಲೋಕ ಬಿಟ್ಟು ಸುಳ್ಳಿನ ಮಹಡಿ ಕಟ್ಟಿಕೊಳ್ಳುವುದು ನಮ್ಮ ಭವಿಷ್ಯಕ್ಕೆ ಮಾರಕವೇ ಹೊರತು ಒಳ್ಳೆಯದಂತೂ ಅಲ್ಲವೇ ಅಲ್ಲ.

ಇಂದು ನಮ್ಮ ಜೀವನದಲ್ಲಿ ಕಾಯ ,ವಾಚ ,ಮನಸ್ಸು ಸದಾ ಹಸಿರಾಗಲು ಪ್ರೀತಿ ,ಸ್ನೇಹ ಬೆಳವಣಿಗೆಯಾಗಬೇಕಿದೆ. ಹಾಗೂ ಸಮೃದ್ಧಿತನದಲ್ಲಿ ಬೆಳೆ ಬೆಳೆದು ಫಲ ನೀಡಲು ನಾವು ಈ ನೆಲದ ನಡವಳಿಕೆಯಂತೆ ಹೊಂದಿಕೊಂಡು ಮನುಜ ಸತ್ವ ಸಾರದಲ್ಲಿ ಸತ್ಯ ,ಶಾಂತಿ, ನೀತಿ, ಪ್ರೀತಿ ತತ್ವಗಳಲ್ಲೆ ಸಾಗಬೇಕು. ಈಗ ಅನೇಕ ಅನೇಕ ವಿತ್ತಂಡವಾದಗಳನ್ನೇ ಮುಂದಿಟ್ಟುಕೊಂಡು ತಮ್ಮ ತಮ್ಮ ಸ್ವಾರ್ಥಕ್ಕೆ ಸತ್ಯದ ಹಾದಿ ತಪ್ಪಿಸುವುದು ಸೋಜಿಗದ ವಿಷಯವೇ ಸರಿ.

ಒಬ್ಬ ಮಹಾತ್ಮ ಗಾಂಧೀಜಿ ಬಾಲ್ಯದಲ್ಲಿ ಸದ್ಗುಣಿಯಾಗಿ ಸತ್ಯ ಸಂಧನಾಗಿ ಹರಿಶ್ಚಂದ್ರ ಹಾಗೂ ಶ್ರವಣಕುಮಾರ ಪಿತೃ ಭಕ್ತಿ ನಾಟಕದಂತ ಮೌಲ್ಯಗಳ ದರ್ಶನದಿಂದ ತಾನು ಪ್ರಪಂಚದಲ್ಲಿ ಆದರ್ಶನಾಗಿ ನಿಂತು, ಈ ಪ್ರಪಂಚದ ಜನತೆಗೆ ಹಣತೆಯಾಗಿ ಬೆಳಗಲು ಸಾಧ್ಯವಾಯಿತು. ಬದುಕಿನ ನಡೆ ಬೆಳಕಿನ ಕಡೆ ಎನ್ನುವ ಮಾತು ಮಾತೃಸ್ಥಾನ ತಂದಿದೆ ಹಾಗೆಯೇ ಬೆವರಿನಲ್ಲೇ ಬೆಟ್ಟ ಹತ್ತಿ ಬೆಟ್ಟದ ತವರೆಲ್ಲ ಹಸಿರ ಹೂರಣವನ್ನು ಕಣ್ಣಿಗೆ ತಣಿಸಿ ಮನಸ್ಸಿಗೆ ಬಣಿಸಿದ ತೇನ್ ಸಿಂಗ್ ಹಿಮಾಲಯ ಪರ್ವತ ಏರಿದ್ದು ನಮ್ಮ ಯುವ ಪೀಳಿಗೆಯ ಹೊಳೆಯುವ ನಕ್ಷತ್ರಗಳಾಗಿ ಪ್ರತಿಯೊಬ್ಬ ಮನಸ್ಸಿನಲ್ಲಿ ಉಳಿದುಕೊಂಡರು. ಹೆಣ್ಣು ನಾಲ್ಕು ಗೋಡೆಗೆ ಮಾತ್ರ ಸೀಮಿತವಲ್ಲ ಆಕೆಯು ಜಗತ್ ಶ್ರೇಷ್ಠತೆಗೆ ತನ್ನದೇ ಸಾಕಷ್ಟು ಕೊಡುಗೆ ಎಂದು ತೋರಿಸಿಕೊಟ್ಟ ಅನೇಕ ಮಹಿಳೆಯರನ್ನು ನಾವು ಇಂದು ಕಾಣುತ್ತಿದ್ದೇವೆ, ಜ್ಯೋತಿಬಾಪುಲೆ ಅಕ್ಷರ ಕ್ರಾಂತಿ ಮಾಡಿ ಜ್ಞಾನ ಬೆಳಕು ನೀಡಿದ್ದು ,ಕಲ್ಪನಾ ಚಾವ್ಲಾ ಮಂಗಳ ಲೋಕದಲ್ಲಿ ವಿಸ್ಮಯ ತೋರಿದ್ದು ನೋಡಿದ್ದರೆ ಹೆಣ್ಣು ಮಕ್ಕಳು ಈ ಲೋಕದ ನಾಲ್ಕು ತಂತಿಯ ನಾದವಾದಕ ಎಂದು ಹೇಳಬಹುದು . ಇಂದು ನಗರ , ಹಳ್ಳಿ ಎನ್ನದೆ ಸಮ ಚಿತ್ರಗಳಾಗಿ



**ಜಿ ಯರಿಸ್ವಾಮಿ ಸಂಕ್ಲಾಪುರ**
**ಹೊಸಪೇಟೆ**

ಸಮ ಹಳಿಯ ಮೇಲೆ ಸಾಗಿ ಅಭಿವೃದ್ಧಿ ರೈಲು ಸಂಚಾರದಲ್ಲಿ ಸಹಭಾಗಿಯಾಗಿದ್ದಾರೆ. ವಿನೋಬಾ ಭಾವೆ ಅವರು ಗ್ರಾಮಗಳ ಉದ್ದಾರವೇ ನಮ್ಮ ಉದ್ದಾರವೆಂದು ಹತ್ತು ಹಲವು ಕನಸುಗಾರರು ಮೋಜಿನಲ್ಲಿ ಸ್ಫೂರ್ತಿ ತುಂಬಿ ' ಪ್ರಯತ್ನ' ಗಾಡಿಯ ಚಕ್ರ ತಿರುಗಿಸುತ್ತಿದ್ದಾರೆ .ಇದರ ಫಲವೇ ನಾವು ಇಂದು ಸುಖ, ಶಾಂತಿ, ನೆಮ್ಮದಿ ಬದುಕು ಸಾಗಾಟದ ಪ್ರೇರಣೆಯಾಗಿದೆ.

ಇಂದು ನಮ್ಮ ವ್ಯಾಪಾರದ ಮನೋ ಧರ್ಮಹೊಂದಿ, ರಾಜಕಾರಣಿಗಳು ದೊಡ್ಡ ದೊಡ್ಡ ವ್ಯಾಪಾರಿಗಳು ತಮ್ಮ ಮನದಲ್ಲೇ ಕನಸಿನ ಕಾರ್ಖಾನೆ ಕಟ್ಟಿ ಆಧುನಿಕ ಯುಗದಲ್ಲಿ ಇತರೆ ದೇಶದಲ್ಲಿ ನಾವು ಯಾರಿಗೂ ಕಡಿಮೆ ಇಲ್ಲಾವೆಂದು ಮೆಟ್ಟಿ ನಡೆಯುತ್ತಿದ್ದಾರೆ. ಆದರೆ ಕಟ್ಟ ಕಡೆಯ ವ್ಯಕ್ತಿಯೂ ಕೂಡ ತಮ್ಮಒಳನೋಟದಲ್ಲೇನಮ್ಮಕನಸುಗಳೂನಡೆದಾಡುವವಿಶ್ವಕೋಶವಾಗಬೇಕು. ಅಂದರೆ ನಮಗೆ ಆದರ್ಶ ವ್ಯಕ್ತಿ ಚಿತ್ರ, ವಸ್ತು ,ನೆನಪಿನ ಬುತ್ತಿ ಆಗಬೇಕು ಆಗೆ ಹೊಸತನದ ಬೆಳೆ ಉತ್ಸಾಹದ ಕಳೆ ನಮ್ಮಲ್ಲೇ ಸದಾ ಇರುತ್ತದೆ. ಇಲ್ಲಿ ಮೇಲು ಕೀಳು ಎಂಬ ಸ್ತರಗಳು ಗೆರೆ ಮಾಸಬೇಕು, ಕಾಯಕದ ಹೊಂಬಣ್ಣ ಕಣ್ಣ ಮುಂದೆ ಮೆರಗುತಿರಬೇಕು ,ಕನಸುಗಳ ಅಂಗಳದಲ್ಲಿ ತಂಗಾಳಿ ಬೀಸಿ ಬೆಳೆದು ಕಲ್ಪವೃಕ್ಷದ ಸಾಕ್ಷಿಯಾಗಬೇಕು .

ಮನಸಿನ ಅಂಗಳದಲ್ಲಿ ಕನಸುಗಳೇ ಅರಳಿ ಹೂವಿನ ಬೃಂದಾವನ ಭವಿಷ್ಯದ ಕೂಸಿಗೆ ತೂಗು ಉದ್ಯಾನವಾಗಬೇಕು ಅದಕ್ಕೆಂತಲೇ ನಮ್ಮ ರೈತ ಹರಕು ಬಟ್ಟೆ ಉಟ್ಟರು ಮುರುಕು ಚಪ್ಪರದಲ್ಲಿದ್ದರೂ. ಈ ನೆಲದ ಘನ ಮಣ್ಣಲ್ಲಿ ಅಮೃತ ಬೆಳೆದು ನಮ್ಮ ಹಸಿವು ಕಳೆಯುತ್ತಿದ್ದಾನೆ . ಭವಿಷ್ಯದ ರಾಜಕ್ಕೆ ಕನಸುಗಳೆಲ್ಲ ನನಸಾಗಿ ಜೀವನವೇ ಸಂಚಲನ ಗೊಳಿಸಬೇಕು. ಸಮಾಜದ ಕಟ್ಟ ಕಡೆಯ ವ್ಯಕ್ತಿಯು ಶಿಕ್ಷಣ ನಕ್ಷತ್ರ ವಾಗದೆ ಅಕ್ಷಯ ಪಾತ್ರೆಯಾಗಬೇಕು, ಸಕಲ ಸೌಲಭ್ಯವು ಸಿಕ್ಕು ಗುಡಿಸಲಿನ ವ್ಯಕ್ತಿಗೂ ದೊರೆಯ ಸೌಕರ್ಯ ದೊರೆಯಬೇಕು. ಕವಿಗಳು ಋಷಿಗಳು, ಜ್ಞಾನಿ ವಿಜ್ಞಾನಿಗಳು ಮಾದರಿಯಾಗಿ ,ಅಕ್ಷರ ,ಅರಿವು ಅವಕಾಶಗಳು ಕನಸಿಗೆ ಕಲ್ಪವೃಕ್ಷವಾಗಿ ಬೆಳೆಯಲು ಸಹಾಯ ,ಸಹಕಾರ ,ಸಹಾನ್ ಭೂತಿ ,ಕನಸಿಗೆ ಪ್ರೇಮ ಭಿಕ್ಷೆಯಾದರೆ . ನಮ್ಮ ಬುದ್ಧ, ಬಸವ, ಅಂಬೇಡ್ಕರ್ ರ ಚಿಂತನೆಗಳು ನಮ್ಮ ಇಂದಿನ ಮಕ್ಕಳ ಹೊಕ್ಕಳ ಬಳ್ಳಿಗೆ ಹೊಕ್ಕು ಮಸ್ತಕದಲ್ಲಿ ಅಲ್ಲದೆ ಅಂತರಾಳದಲ್ಲಿ ದಿವ್ಯದೃಷ್ಟಿಗೆ ಪುಷ್ಠಿ ನೀಡುತ್ತದೆ . ತಿಳಿ ನೀರಿನ ಎಳೆನೀರು ಪ್ರತಿ ಬಡವನ ಸಂಕಷ್ಟಕ್ಕೆ ತಂಪು ನೀಡುವ ಹೊಳೆಯಾಗಬೇಕು. ಆಗ ಮಾತ್ರ ಬಡವ ಬಲ್ಲಿದನಾಗಿ ಬೆಳೆಯಲು ಸಾಧ್ಯವಾಗುತ್ತದೆ. ಕನಕ-ಪುರಂದರ ಚಿಂತೆಗಳು ಹಾಗೂ ಪ್ರತಿ ಹೋರಾಟಗಾರರ ಯೋಚನೆ ಲಹರಿಯಂತೆ ಸ್ವಾತಂತ್ರ, ಸಮಾನತೆ ಸಹೋದರತೆ ಒದಗಿ ಅಖಂಡ ಭಾರತ ಭವ್ಯತೆಯಲ್ಲಿ ಕಂಡ ಕನಸಿಗೆ ಮೊದಲು ನಾವು ಸಾಕ್ಷರಾಗಬೇಕು. ಕನ್ನಡಿಯ ಮುಂದೆ ನಿಂತು ನಮ್ಮ ನಿಜರೂಪ ನೋಡಿದ ಮೇಲೆ ಅದೇ ಕನ್ನಡಿಯೊಳಗೆ ನಾವು ನಮ್ಮನ್ನು ಮನುಜಮುಖಿಯಾಗಿ ನೋಡಲು ಅಕ್ಕರೆಯ ಲೋಕದಲ್ಲಿ ಅಕ್ಷರವ ಕಲಿತು ಸಕ್ಕರೆಯಾಗಿ ಬಾಳಬೇಕು, ಅದಕ್ಕೆ ನಾವು ಆಗಾಗ ಕನ್ನಡಿ ನೋಡಿಕೊಳ್ಳಬೇಕು ಎಲ್ಲರೂ ಎಲ್ಲಾರಗಾಗಿ ಕಾಳಜಿ ವಹಿಸಬೇಕು ' ನಮ್ಮಿಂದ ನಮಗಾಗಿ' ಎನ್ನುವ ಯೋಚನೆಯನ್ನು ಚಾಚು ತಪ್ಪದೇ ಪರಿಪಾಲಿಸಬೇಕು. ಇದಕ್ಕೆ ನಮ್ಮ ಮೂಲ ಕನ್ನಡಿ ನಮ್ಮ ಆತ್ಮ ,ನಮ್ಮ ಸಂವಿಧಾನವನ್ನು ಪದೇಪದೇ ಮೌಲ್ಯಗಳಿಗೆ ಒಳಪಡಿಸಬೇಕು. ಆಗ ನಾವು ನಮ್ಮ ಭವಿಷ್ಯದ ಕೂಸುಗಳು ನಗುವ ಲೋಕದಲಿ ಬೆಳಗುವ ಸೂರ್ಯನಂತೆ ಆಗುತ್ತಾರೆ, ನಮ್ಮ ಮನೆಯ ದೀಪ ಸುತ್ತಲೂ ಕತ್ತಲು ಸರಿಸಿ ಸುತ್ತಲೂ ಬೆಳಕು ಉಣಿಸಿ ಸಂಭ್ರಮದ ತೋರಣ ಗಾಲಿಯನ್ನು ಶಕ್ತಿ ,ಶಾಂತಿ ,ತ್ಯಾಗ ಮೂರ್ತಿಯಾಗಿ ಉರುಳಿಸಬೇಕು .ಆಗ ಮನಸ್ಸಿನ ಅಂಗಳದಲ್ಲಿ ಕನಸಿನ ಹೂ ಅರಳಿ, ಜೀವನ ನದಿ ದಡೆ ಸೇರಿ ಜೀವನದ ಜೀವನಾಮೃತ ಸವಿಯಲು ಸಾಧ್ಯವಾಗುತ್ತದೆ.

# ಜೀತ ಪದ್ಧತಿ ನಿರ್ಮೂಲನೆ ಅಗತ್ಯ

## ನ್ಯಾ.ರಾಜೇಶ್ ಎನ್.ಹೊಸಮನಿ ಹೇಳಿಕೆ | ಜೀತಕ್ಕಾಗಿ ಮಕ್ಕಳನ್ನು ದುಡಿಸಿಕೊಳ್ಳುವುದು ಅಪರಾಧ




■ **ಹಂಪಿ ಟೈಮ್ಸ್ ಬಳ್ಳಾರಿ**

ಜೀತಕ್ಕಾಗಿ ವ್ಯಕ್ತಿ ಹಾಗೂ ಮಕ್ಕಳನ್ನು ದುಡಿಸಿಕೊಳ್ಳುವುದು ಅಮಾನವೀಯ ಮತ್ತು ಕ್ರಿಮಿನಲ್ ಅಪರಾಧವಾಗಿದ್ದು, ಜೀತ ಪದ್ಧತಿ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸುವ ಮೂಲಕ ನಿರ್ಮೂಲನೆ ಅಗತ್ಯವಾಗಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯರು ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್.ಹೊಸಮನಿ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕಾರ್ಮಿಕ ಇಲಾಖೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬಾಲಕಾರ್ಮಿಕ ಯೋಜನೆ ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ ಜೀತ ಪದ್ಧತಿ ನಿರ್ಮೂಲನಾ ದಿನಾಚರಣೆ ಕಾರ್ಯಕ್ರಮವನ್ನು ಪ್ರತಿಜ್ಞೆ ವಿಧಿ ಸ್ವೀಕರಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಆರ್ಥಿಕ ಸಮಸ್ಯೆಯಿಂದಾಗಿ ಹಾಗೂ ಕನಿಷ್ಟ ಕೂಲಿ ಇಲ್ಲದೆ ಜೀತದಾಳುಗಳಾಗಿ ಇನ್ನೊಬ್ಬರ ಕೈ ಕೆಳಗೆ ಜೀತ ಕೆಲಸ ಮಾಡುತ್ತಾರೆ. ಈ ಪದ್ಧತಿಯು ಹಿಂದಿನ ಕಾಲದಲ್ಲಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಹೆಚ್ಚಾಗಿ ಕಂಡುಬರುತ್ತಿತ್ತು. 1976 ರಲ್ಲಿ ಜೀತ ಪದ್ಧತಿ ನಿಷೇಧ ಕಾಯ್ದೆ ಜಾರಿಗೆ ತರುವ ಮೂಲಕ ಜೀತ ಪದ್ಧತಿಯನ್ನು ಕೊನೆಗಾಣಿಸುತ್ತ ಬರಲಾಯಿತು ಎಂದರು.

ಜೀತದಾಳುಗಳನ್ನು ಗುರುತಿಸಿ ಅವರಿಗೆ ಪುನರ್‌ವಸತಿ ಹಾಗೂ ಸರ್ಕಾರದ ಇತರ ಸೌಲಭ್ಯ ಒದಗಿಸುವ ಮೂಲಕ ಮುಖ್ಯವಾಹಿನಿಗೆ ತರುವ ಜವಾಬ್ದಾರಿ ಅಧಿಕಾರಿಗಳ ಮತ್ತು ನಮ್ಮೆಲ್ಲರದ್ದಾಗಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ ಈಗಲೂ ಜೀತಕಾರ್ಮಿಕ ಪದ್ಧತಿ ಪ್ರಕರಣಗಳು ಕಂಡುಬರುತ್ತಿವೆ. ಸಾರ್ವಜನಿಕರಲ್ಲಿ ಈ ಪದ್ಧತಿ ಕುರಿತು ಹೆಚ್ಚು ಅರಿವು ಮೂಡಿಸುವ ಕೆಲಸವಾಗಬೇಕಿದೆ. ಈ ನಿಟ್ಟಿನಲ್ಲಿ ಪ್ರತಿ ವರ್ಷ ಫೆ.9 ರಂದು ಜೀತ ಪದ್ಧತಿ ನಿರ್ಮೂಲನಾ ದಿನಾಚರಣೆಯನ್ನು ಆಚರಿಸಲಾಗುತ್ತದೆ ಎಂದು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಝುಬೇರ್ ಅವರು ಅಧ್ಯಕ್ಷತೆ ಮಾತನಾಡಿ, ಜೀತ ಪದ್ಧತಿಯು ಸಮಾಜದಲ್ಲಿ ಇರುವಂತಹ ಅನಿಷ್ಠ ಪದ್ಧತಿಯಾಗಿದೆ. ನಾವೆಲ್ಲರೂ ಸಮಾನತೆ ಮತ್ತು ಸ್ವಾತಂತ್ರ್ಯತೆಯಿಂದ ಬದುಕಲು ಸಂವಿಧಾನವು ಹಕ್ಕುಗಳನ್ನು ನೀಡಿದೆ. ಇನ್ನೊಬ್ಬರನ್ನು ಶೋಷಿಸಿ ಬದುಕಲು ಅವಕಾಶವಿಲ್ಲ ಎಂದು ತಿಳಿಸಿದರು.

ಕಷ್ಟದಲ್ಲಿರುವ ಜನರ ಸಮಸ್ಯೆಗಳಿಗೆ ಸ್ಪಂದಿಸಬೇಕು. ಅನೇಕ ಸಾಮಾಜಿಕ ಅನಿಷ್ಠಗಳಂತೆ ಜೀತ ಪದ್ಧತಿಯೂ ಅನಿಷ್ಠ ಪದ್ಧತಿಯಾಗಿದೆ. ಇದನ್ನು ಹೋಗಲಾಡಿಸುವ ಜವಾಬ್ದಾರಿ ಸಮಾಜದ ಪ್ರತಿಯೊಬ್ಬರ ಮೇಲಿದೆ ಎಂದು ಅಭಿಪ್ರಾಯ ಪಟ್ಟರು.

ಕಾರ್ಯಕ್ರಮದಲ್ಲಿ ಜಿಲ್ಲಾವಾರು ಜೀತ ಕಾರ್ಮಿಕರ ಮಾಹಿತಿಯನ್ನೊಳಗೊಂಡ ವರದಿಯನ್ನು ಬಿಡುಗಡೆ ಮಾಡಲಾಯಿತು.

ಜನ ಜಾಗೃತಿ ಜಾಥಾ

ಜೀತ ಪದ್ಧತಿ ದಿನಾಚರಣೆಯ ಅಂಗವಾಗಿ ಜಿಲ್ಲಾಧಿಕಾರಿಗಳ ಕಚೇರಿ ಆವರಣದಿಂದ ಹಮ್ಮಿಕೊಂಡಿದ್ದ ಜನ ಜಾಗೃತಿ ಜಾಥಾಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯರು ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್.ಹೊಸಮನಿ ಮತ್ತು ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಝುಬೇರ್ ಅವರು ಜೊತೆಗೂಡಿ ಹಸಿರು ನಿಶಾನೆ ತೋರಿಸುವುದರ ಮೂಲಕ ಚಾಲನೆ ನೀಡಿದರು.

ಜಾಥಾವು ಜಿಲ್ಲಾಧಿಕಾರಿಗಳ ಕಚೇರಿ ಆವರಣದಿಂದ ಆರಂಭವಾಗಿ ಗಡಿಗಿ ಚೆನ್ನಪ್ಪ ವೃತ್ತದ ಮೂಲಕ ಮರಳಿ ಜಿಲ್ಲಾಧಿಕಾರಿಗಳ ಕಚೇರಿ ಆವರಣಕ್ಕೆ ತಲುಪಿತು. ಜಾಥಾದಲ್ಲಿ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡು ಜೀತ ಪದ್ಧತಿಯ ಕುರಿತು ಘೋಷವಾಕ್ಯಗಳನ್ನು ಕೂಗಿದ್ದು, ವಿಶೇಷವಾಗಿತ್ತು.

ಈ ಸಂದರ್ಭದಲ್ಲಿ ಕಾರ್ಮಿಕ ನಿರೀಕ್ಷಕರಾದ ಎಂ.ರವಿದಾಸ್, ಬಾಲಾ ಕಾರ್ಮಿಕ ಯೋಜನಾ ನಿರ್ದೇಶಕ ಮೌನೇಶ್ ಸೇರಿದಂತೆ ಜಿಲ್ಲಾಧಿಕಾರಿಗಳ ಕಚೇರಿಯ ಅಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಯವರು, ಶಾಲಾ ಮಕ್ಕಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

# ಜಾನಪದ ಕಾರ್ಯಕ್ರಮ ಮೂಲಕ ತಂಬಾಕು ನಿಯಂತ್ರಣಕ್ಕೆ ಜಾಗೃತಿ



■ **ಹಂಪಿ ಟೈಮ್ಸ್ ಕೊಪ್ಪಳ**

ತಂಬಾಕು ಸೇವನೆಯಿಂದ ಆರೋಗ್ಯದ ಮೇಲೆ ಆಗುವ ದುಷ್ಪರಿಣಾಮಗಳ ಕುರಿತು ಜಾನಪದ ಕಾರ್ಯಕ್ರಮಗಳ ಮೂಲಕ ತಂಬಾಕು ನಿಯಂತ್ರಣಕ್ಕೆ ಯಲಬುರ್ಗಾದ ಬಸ್ ನಿಲ್ದಾಣದಲ್ಲಿ ಇತ್ತೀಚೆಗೆ ವಿಶೇಷ ಜಾಗೃತಿ ಮೂಡಿಸಲಾಯಿತು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಿರಿಯ ನಿರೀಕ್ಷಣಾಧಿಕಾರಿ ಚನ್ನಬಸಯ್ಯ ಎಸ್ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿ, ತಂಬಾಕು ಸೇವನೆಯಿಂದ ಅನಾರೋಗ್ಯ ಉಂಟಾಗುತ್ತದೆ. ತಂಬಾಕಿನ ನಿಕೋಟಿನ್ ಅಂಶದಿಂದ ನಮ್ಮ ದೇಹವು ಕ್ಯಾನ್ಸರ್, ದಂತ ಕ್ಷಯ, ಗರ್ಭಪಾತ ಸೇರಿದಂತೆ ಇನ್ನೂ ಅನೇಕ ಸಮಸ್ಯೆಗಳಿಗೆ ತುತ್ತಾಗಿ ಸಾವನ್ನು ತರುತ್ತದೆ. ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧಿತ ಕಾನೂನು ಜಾರಿಯಲ್ಲಿದೆ. ತಂಬಾಕು ಸೇವನೆ ಆರೋಗ್ಯಕ್ಕೆ ತುಂಬಾ ಹಾನಿಕಾರಕವಾಗಿದ್ದು, ಈ ಬಗ್ಗೆ ಎಚ್ಚರಿಕೆ ವಹಿಸಬೇಕು ಎಂದು ತಿಳಿಸಿದರು.

ಇದೆ ಸಂದರ್ಭದಲ್ಲಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಯಲಬುರ್ಗಾ ಘಟಕದ ಸಂಚಾರ ನಿರೀಕ್ಷ ಪ್ರಕಾಶ ಸೇರಿದಂತೆ ಮತ್ತಿತರರಿದ್ದರು.

ಬಳಿಕ, ಅಳವಂಡಿಯ ಶ್ರೀ ಕಾರ್ಗಿಲ್ ಮಲ್ಲಯ್ಯ ಅಂಗವಿಕಲರ ಸಂಘದ ಕಲಾವಿದರಾದ ವೀರೇಶ ಹಾಲಗುಂಡಿ, ಸಿದ್ದಲಿಂಗಯ್ಯ ಗೋಲ್ರೇಕೊಪ್ಪ, ದವಲಸಾಬ ಅತ್ತಾರ, ನಾಗರಾಜ ಕಂಕಿ, ಮಹಾದೇವಪ್ಪ ಐನಕ್ಕನವರ, ಸಿದ್ದಲಿಂಗಮ್ಮ ಹಾಲಗುಂಡಿ, ಶಿವಲಿಂಗಮ್ಮ ಹಲಗಿ ಕಲಾವಿದರು ತಂಬಾಕು ಸೇವನೆಯಿಂದ ಆರೋಗ್ಯದ ಮೇಲೆ ಆಗುವ ದುಷ್ಪರಿಣಾಮಗಳ ಕುರಿತು ಹಾಗೂ ತಂಬಾಕು ನಿಯಂತ್ರಣ ಕುರಿತು ಜಾನಪದ ಸಂಗೀತ ಬೀದಿ ನಾಟಕ ಕಲಾಭಿನಯದ ಮೂಲಕ ಸಾರ್ವಜನಿಕರಿಗೆ ಅರಿವು ಮೂಡಿಸಿದರು.

# ಮತದಾನದ ಅರಿವಿನ ಜಾಗೃತಿ ಅಭಿಯಾನ

■ **ಹಂಪಿ ಟೈಮ್ಸ್ ಕೊಪ್ಪಳ**

ಭಾರತ ಚುನಾವಣಾ ಆಯೋಗ ಹಾಗೂ ಉನ್ನತ ಶಿಕ್ಷಣ ಸಚಿವಾಲಯದೊಂದಿಗೆ ಫೆ.01 ರಂದು ಚರ್ಚಿಸಿದಂತೆ ವಿಶ್ವವಿದ್ಯಾಲಯಗಳ ಅನುದಾನ ಆಯೋಗ(ಯುಜಿಸಿ) ಮತ್ತು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು(ಎಐಸಿಟಿಇ) ಗಳ ಅಡಿಯಲ್ಲಿ ಬರುವ ಜಿಲ್ಲೆಯ ಎಲ್ಲ ಕಾಲೇಜುಗಳಲ್ಲಿ ಯುವ ಮತದಾರರಿಗೆ ಮತದಾನದ ಅರಿವು ಮೂಡಿಸುವ ಸಲುವಾಗಿ ಫೆಬ್ರವರಿ ಮಾಹೆಯಲ್ಲಿ ಎರಡು ವಾರಗಳ ಅಭಿಯಾನವನ್ನು ಹಮ್ಮಿಕೊಳ್ಳಲು ನಿರ್ಣಯಿಸಲಾಗಿದೆ.

ಭವಿಷ್ಯ ಹಾಗೂ ಯುವ ಮತದಾರರಲ್ಲಿ ಮತದಾನದ ಕುರಿತು ಅರಿವು ಮತ್ತು ಜಾಗೃತಿ ಮೂಡಿಸುವ ಸಲುವಾಗಿ ಕೇಂದ್ರ ಶಿಕ್ಷಣ ಸಚಿವಾಲಯದೊಂದಿಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಉನ್ನತ ಶಿಕ್ಷಣ ಇಲಾಖೆಗಳನ್ನು ಒಳಗೊಂಡಂತೆ 2023 ರ ನವೆಂಬರ್ 02 ರಂದು ಒಡಂಬಡಿಕೆ ಮಾಡಿಕೊಂಡಿದೆ.

ಭಾರತ ಚುನಾವಣಾ ಆಯೋಗವು ಉನ್ನತ ಶಿಕ್ಷಣ ಸಚಿವಾಲಯದೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆ ಪ್ರಕಾರ ಯುವ ಮತದಾರರಲ್ಲಿ ಮತದಾನದ ಅರಿವು ಮತ್ತು ಮತದಾರರ ಶಿಕ್ಷಣವನ್ನು ಶಾಲಾ ಕಾಲೇಜುಗಳಲ್ಲಿ ಔಪಚಾರಿಕ ಶಿಕ್ಷಣವನ್ನು ನೀಡಿ, ಮತದಾನದ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಮಾಡುವುದಾಗಿರುತ್ತದೆ. ಯುಜಿಸಿ ಮತ್ತು ಎಐಸಿಟಿಇ ಗಳ ಅಡಿಯಲ್ಲಿ ಬರುವ ಎಲ್ಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಎನ್‌ಎಸ್‌ಎಸ್/ಎನ್‌ವೈಕೆಎಸ್ ವೇದಿಕೆಗಳ ಮುಖಾಂತರ ಯಾವುದೇ ರಾಜಕೀಯ ಪ್ರೇರಿತವಲ್ಲದ, ಪಕ್ಷಾತೀತವಾಗಿ ಮತದಾನದ ಶಿಕ್ಷಣ ಮತ್ತು ಮತದಾನದ ಅರಿವು/ ಜಾಗೃತಿ ಮೂಡಿಸುವ ಚಟುವಟಿಕೆಗಳನ್ನು ಕೈಗೊಳ್ಳಲು ಫೆಬ್ರವರಿಯಲ್ಲಿ ಎರಡು ವಾರಗಳ ಅಭಿಯಾನವನ್ನು ಹಮ್ಮಿಕೊಳ್ಳಬೇಕು. ಈ ಸಂಬಂಧ ಕೈಗೊಂಡ ಚಟುವಟಿಕೆಗಳ ಸಾಧನೆಯ ಬಗ್ಗೆ ಒಥಿ Bharath portal ನಲ್ಲಿ ದಾಖಲಿಸಬೇಕು. ಹೆಚ್ಚಿನ ಮಾಹಿತಿಗಾಗಿ https://drive.google.com/drive/folders/199911kTcwINSZpDdDq18CaSAxyKRukw?usp=sharing ಗೆ ಭೇಟಿ ನೀಡಬಹುದು. ಪ್ರಾದೇಶಿಕ ಭಾಷೆಯಲ್ಲಿ ಮಾಹಿತಿ ಪಡೆಯಲು https://drive.google.com/drive/folders/1MWQ1jMic4c5MwWNjDi1yDGRutHUddb?usp=drive ಲಿಂಕ್ ಅನ್ನು ಸಂಪರ್ಕಿಸಬಹುದು ಎಂದು ಚುನಾವಣಾಧಿಕಾರಿ ಕೂರ್ಮಾ ರಾವ್ ಎಂ ತಿಳಿಸಿದ್ದಾರೆ.

# ಅನ್ನಭಾಗ್ಯ ಗ್ಯಾರಂಟಿ ಯೋಜನೆ

■ **ಹಂಪಿ ಟೈಮ್ಸ್ ಕೊಪ್ಪಳ**

ಸರ್ಕಾರದ ಅನ್ನಭಾಗ್ಯ (ಡಿಬಿಟಿ) ಗ್ಯಾರಂಟಿ ಯೋಜನೆಯ ವ್ಯಾಪ್ತಿಗೆ ಒಳಪಡದಂತಿರುವ ವ್ಯಕ್ತಿಗಳು ಒಂದು ವೇಳೆ ಅರ್ಹರು ಎಂದು ಕಂಡುಬಂದಲ್ಲಿ ಅಥವಾ ಬ್ಯಾಂಕ್ ಖಾತೆ ಸಮಸ್ಯೆ ಹೊಂದಿದ್ದಲ್ಲಿ ಅಂತಹ ಸಮಸ್ಯೆಗಳನ್ನು ಸಂವಿಧಾನ ಜಾಗೃತಿ ಜಾಥಾ ಸಮಯದಲ್ಲಿ ಸರಿಪಡಿಸಲಾಗುವುದು.

ಜ.26 ರಿಂದ ಫೆ.23 ರವರೆಗೆ ಜಿಲ್ಲೆಯಲ್ಲಿ ಸಂವಿಧಾನ ಜಾಗೃತಿ ಜಾಥಾವನ್ನು ಏರ್ಪಡಿಸಲಾಗಿದ್ದು, ಮಾರ್ಗ ನಕ್ಷೆಯಂತೆ ಜಾಥಾವು ಎಲ್ಲ ತಾಲ್ಲೂಕುಗಳಲ್ಲಿ ಸಂಚರಿಸಲಿದೆ. ಇದೇ ಸಂದರ್ಭದಲ್ಲಿ ಸರ್ಕಾರದ ಗ್ಯಾರಂಟಿ ಯೋಜನೆಗಳಿಂದ ಹೊರಗುಳಿದ ಅರ್ಹ ಫಲಾನುಭವಿಗಳನ್ನು ಗುರುತಿಸಿ, ತಾಂತ್ರಿಕ ಸಮಸ್ಯೆಯನ್ನು ಪರಿಹರಿಸಿ ಯೋಜನೆಯ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಅದರಂತೆ ಅನ್ನಭಾಗ್ಯ(ಡಿಬಿಟಿ) ಯೋಜನೆಯ ವ್ಯಾಪ್ತಿಗೆ ಒಳಪಡದ ವ್ಯಕ್ತಿಗಳು ಒಂದು ವೇಳೆ ಅರ್ಹರು ಎಂದು ಕಂಡುಬಂದಲ್ಲಿ ಸೌಲಭ್ಯವನನು ಪಡೆಯಲು ನೆರವು ನೀಡಲಾಗುವುದು. ಅರ್ಹ ಫಲಾನುಭವಿಗಳ ಬ್ಯಾಂಕ್ ಖಾತೆಗಳು ಸಮರ್ಪಕವಾಗಿ ಇಲ್ಲದಿರುವುದರಿಂದ ಯೋಜನೆಯ ಹೊರಗೆ ಉಳಿದಿದ್ದಲ್ಲಿ ಅಂತಹ ವ್ಯಕ್ತಿಗಳ ಬ್ಯಾಂಕ್ ಖಾತೆಯನ್ನು ಸರಿಪಡಿಸಲಾಗುವುದು. ಕೊಪ್ಪಳ ತಾಲ್ಲೂಕಿನಲ್ಲಿ ಜಾಥಾ ಸಂಚರಿಸಿದ 39 ಗ್ರಾಮಗಳಿಂದ 158 ಫಲಾನುಭವಿಗಳ ಖಾತೆಗಳನ್ನು ಸರಿಪಡಿಸಿ ಅನ್ನಭಾಗ್ಯ ಗ್ಯಾರಂಟಿ ಯೋಜನೆಯ ವ್ಯಾಪ್ತಿಗೆ ತರಲಾಗಿದೆ. ಬಾಕಿ ಉಳಿದ ಅರ್ಹ ಫಲಾನುಭವಿಗಳು ತಮ್ಮ ಗ್ರಾಮದಲ್ಲಿ ಸಂವಿಧಾನ ಜಾಗೃತಿ ಜಾಥಾ ಸಂಚರಿಸುವ ಸಂದರ್ಭದಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸಿ ಯೋಜನೆಯ ಸೌಲಭ್ಯ ಪಡೆಯಬೇಕು ಎಂದು ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

## ಮೈಕ್ರೋ ನ್ಯೂಸ್

### ಫೆ.12 ರಂದು ಜಿಲ್ಲಾ ಮಟ್ಟದ ಅಂತರ ಇಲಾಖೆ ಸಮನ್ವಯ ಸಭೆ

**ಹಂಪಿ ಟೈಮ್ಸ್ ಬಳ್ಳಾರಿ**
ಜಿಲ್ಲಾ ಸರ್ವೇಕ್ಷಣಾ ಘಟಕ ವತಿಯಿಂದ ಪಿಪಿಸಿಎಲ್ ಅಡಿ ಜಿಲ್ಲೆಯ ಎಲ್ಲಾ ಸಾರ್ವಜನಿಕ ಪ್ರದೇಶಗಳಲ್ಲಿ ಇಲಿ ಜ್ವರ (ಲೆಪ್ಟೋಸ್ಪೈರೋಸಿಸ್) ಕುರಿತಂತೆ ಜಿಲ್ಲಾ ಮಟ್ಟದ ಅಂತರ ಇಲಾಖೆ ಸಮನ್ವಯ ಸಭೆಯನ್ನು ಫೆ.12 ರಂದು ಸಂಜೆ 04.30 ಕ್ಕೆ ಜಿಪಂ ನಜೀರ್‌ಸಾಬ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಸರ್ವೇಕ್ಷಣಾ ಘಟಕದ ಜಿಲ್ಲಾ ಸರ್ವೇಕ್ಷಣಾ ಅಧಿಕಾರಿಗಳು ತಿಳಿಸಿದ್ದಾರೆ.

### ಫೆ.10 ರಂದು ವಿದ್ಯುತ್ ವ್ಯತ್ಯಯ

**ಹಂಪಿ ಟೈಮ್ಸ್ ಬಳ್ಳಾರಿ**
ನಗರ ಜೆಸ್ಕಾಂ ಉಪವಿಭಾಗ-1ರ ವ್ಯಾಪ್ತಿಗೆ ಬರುವ 110/11ಕೆ.ವಿ ಸೌತ್ ವಿದ್ಯುತ್ ವಿತರಣ ಕೇಂದ್ರದಿಂದ ವಿದ್ಯುತ್ ಸರಬರಾಜು ಆಗುವ ಎಫ್-47 ಫೀಡರ್‌ನ ವಿದ್ಯುತ್ ಪರಿವರ್ತಕ ಸ್ಥಳಾಂತರ ಕಾಮಗಾರಿ ಕೈಗೆತ್ತಿಕೊಳ್ಳುತ್ತಿರುವುದರಿಂದ ಫೆ.10 ರಂದು ಬೆಳಿಗ್ಗೆ 10 ರಿಂದ ಸಂಜೆ 05 ಗಂಟೆವರೆಗೆ ನಗರದ ಆಂಧ್ರಾಳ್ ರಸ್ತೆ, ಕೊಲಮಿ ಚೌಕ್, ಮಿಲ್ಲರ್‌ಪೇಟೆ ಸೇರಿದಂತೆ ಇನ್ನೂ ಮುಂತಾದ ಏರಿಯಾಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ವಿದ್ಯುತ್ ಗ್ರಾಹಕರು ಹಾಗೂ ಸಾರ್ವಜನಿಕರು ಸಹಕರಿಸಬೇಕು ಎಂದು ಸಹಾಯಕ ಇಂಜಿನಿಯರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಫೆ.12 ರಂದು ಜಿಲ್ಲಾ ಮಟ್ಟದ ಸಮನ್ವಯ ಸಮಿತಿಯ ಪ್ರಗತಿ ಪರಿಶೀಲನಾ ಸಭೆ

**ಹಂಪಿ ಟೈಮ್ಸ್ ಬಳ್ಳಾರಿ**
ಜಿಲ್ಲಾ ಸರ್ವೇಕ್ಷಣಾ ಘಟಕ ವತಿಯಿಂದ ರಾಷ್ಟ್ರೀಯ ರೇಬೀಸ್ ನಿಯಂತ್ರಣ ಕಾರ್ಯಕ್ರಮ ಅಡಿ ಜಿಲ್ಲೆಯ ಎಲ್ಲಾ ಸಾರ್ವಜನಿಕ ಪ್ರದೇಶಗಳಲ್ಲಿ ನಾಯಿ ಕಡಿತ ಕುರಿತಂತೆ ಜಿಲ್ಲಾ ಮಟ್ಟದ ಸಮನ್ವಯ ಸಮಿತಿಯ ಪ್ರಗತಿ ಪರಿಶೀಲನಾ ಸಭೆಯನ್ನು ಫೆ.12 ರಂದು ಸಂಜೆ 05 ಗಂಟೆಗೆ ಜಿಪಂ ನಜೀರ್‌ಸಾಬ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಸರ್ವೇಕ್ಷಣಾ ಘಟಕದ ಜಿಲ್ಲಾ ಸರ್ವೇಕ್ಷಣಾ ಅಧಿಕಾರಿಗಳು ತಿಳಿಸಿದ್ದಾರೆ.







# ಸರ್ವರ ಅಭಿವೃದ್ಧಿ ಸಂವಿಧಾನದ ಆಶಯ

## ಜಿಲ್ಲಾ ಪಂಚಾಯತ್ ಸಿಇಓ ರಾಹುಲ್ ಶರಣಪ್ಪ ಸಂಕನೂರ ಹೇಳಿಕೆ | ಸಂವಿಧಾನ ಜಾಗೃತಿ ಜಾಥಾ | ಬೆಟ್ಟದತ್ತ ನಡಿಗೆ

**ಹಂಪಿ ಟೈಮ್ಸ್ ಬಳ್ಳಾರಿ**
ಸಂವಿಧಾನದ ಮೌಲ್ಯ, ಆಶಯಗಳ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಎಲ್ಲರೂ ಕೈಜೋಡಿಸಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ಕರೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಸಮಾಜ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಸಂವಿಧಾನ ಅಂಗೀಕಾರಗೊಂಡು 75ನೇ ವರ್ಷ ಪ್ರಯುಕ್ತ 'ಸಂವಿಧಾನ ಜಾಗೃತಿ ಜಾಥಾ' ಅಂಗವಾಗಿ ಶುಕ್ರವಾರ ಹಮ್ಮಿಕೊಂಡಿದ್ದ ಐತಿಹಾಸಿಕ ಬಳ್ಳಾರಿ ಬೆಟ್ಟ ಹತ್ತುವ ಸಂವಿಧಾನ ನಡಿಗೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರು ರಚಿಸಿದ ನಮ್ಮ ಸಂವಿಧಾನ ಇಡೀ ಪ್ರಪಂಚದಲ್ಲಿಯೇ ಅತ್ಯಂತ ಶ್ರೇಷ್ಠ ಸಂವಿಧಾನವಾಗಿದೆ. ಈ ಸಂವಿಧಾನ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಅಗತ್ಯವಿದೆ ಎಂದರು.

ಸಂವಿಧಾನದ ತತ್ವಾದರ್ಶಗಳನ್ನು ಎತ್ತಿಹಿಡಿಯುವ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಸಂವಿಧಾನ ಕುರಿತ ಅರಿವು



ಹೊಂದಬೇಕು. ಸಂವಿಧಾನ ಕುರಿತು ಜಾಗೃತಿ ಮೂಡಿಸಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಇದರ ಸಲುವಾಗಿ ಅಧಿಕಾರಿಗಳು, ವಿದ್ಯಾರ್ಥಿಗಳೊಂದಿಗೆ ನಗರದ ಐತಿಹಾಸಿಕ ಪ್ರಸಿದ್ಧ ಏಕಶಿಲಾ ಬೆಟ್ಟ ಹತ್ತುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಎಲ್ಲರೂ ಸುರಕ್ಷಿತವಾಗಿ ಬೆಟ್ಟ ಹತ್ತಿ, ಇಳಿಯಬೇಕು ಎಂದರು.

ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್ ಅವರು ಮಾತನಾಡಿ, ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಸಂವಿಧಾನ ಮೌಲ್ಯ ಮತ್ತು ಆದರ್ಶಗಳನ್ನು ರಾಜ್ಯ, ರಾಷ್ಟ್ರ ಮಟ್ಟಕ್ಕೆ ಪಸರಿಸುವ ಕಾರ್ಯವಾಗಬೇಕಿದೆ. ಇದಕ್ಕೆ ಎಲ್ಲರ ಸಹಕಾರ ಅತ್ಯಗತ್ಯವಾಗಿದೆ ಎಂದು ಹೇಳಿದರು.

ಅಧಿಕಾರಿಗಳು ಹಾಗೂ ವಿದ್ಯಾರ್ಥಿಗಳನ್ನೊಳಗೊಂಡ ನಡಿಗೆಯು ಬೆಟ್ಟದ ತುತ್ತ ತುದಿ ತಲುಪಿ, ಬಲೂನ್‌ಗಳನ್ನು ಹಾರಿಸಿ ಸಂಭ್ರಮಿಸುವ ಮೂಲಕ ಸಂವಿಧಾನ ಜಾಗೃತಿ ನಡಿಗೆಗೆ ಮೆರಗು ತಂದರು.

ಜಿಲ್ಲಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ಸಂವಿಧಾನ ಪ್ರಸ್ತಾವನೆ ಭೋಧಿಸಿದರು. ನಂತರ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಸತೀಶ್ ಕೆ.ಹೆಚ್ ಅವರು ಸಂವಿಧಾನ ಜಾಗೃತಿ ಕುರಿತ ಗೀತೆಗಳನ್ನು ಹೇಳಿದರು.

ಸಂವಿಧಾನ ನಡಿಗೆ ಅಂಗವಾಗಿ ಬೆಟ್ಟ ಹತ್ತುವ ಕೆಳ ತುದಿಯಲ್ಲಿ ರಂಗೋಲಿಯಲ್ಲಿ ಅರಳಿದ ಡಾ.ಬಿ.ಆರ್. ಅಂಬೇಡ್ಕರ್ ಅವರ ರೂಪ, ಸಂವಿಧಾನ ಪೀಠಿಕೆ, ಅಶೋಕ ಚಕ್ರ, ಸಂಸತ್ ಭವನ ಹಾಗೂ ನಮ್ಮ ಸಂವಿಧಾನ ಎಂದು ಬಿಡಿಸಿದ ರಂಗೋಲಿಯು ಆಕರ್ಷಣೆಯಾಗಿತ್ತು.

ಈ ಸಂದರ್ಭದಲ್ಲಿ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಸತೀಶ್.ಕೆ.ಹೆಚ್., ಅಬಕಾರಿ ಉಪ ಆಯುಕ್ತ ಮಂಜುನಾಥ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ.ರಮೇಶ್ ಬಾಬು, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಜಲಾಲಪ್ಪ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕಿ ಮಮತಾ.ಪಿ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು, ರೆಡ್‌ಕ್ರಾಸ್ ಸ್ವಯಂ ಸೇವಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಮಕ್ಕಳ ಮನಸ್ಸಿನಲ್ಲಿ ಜ್ಞಾನ ಶಾಶ್ವತವಾಗಿ ನೆಲೆಸಲು ಭೋದನೆ ಪರಿಣಾಮಕಾರಿಯಾಗಿರಲಿ

## ಕ್ಷೇತ್ರ ಶಿಕ್ಷಣಾಧಿಕಾರಿ ಪದ್ಮನಾಭ ಕರಣಂ ಹೇಳಿಕೆ | ವಿಜ್ಞಾನ ಸಂವಹನ ಕಾರ್ಯಾಗಾರ

**ಹಂಪಿ ಟೈಮ್ಸ್ ಕೊಟ್ಟೂರು**
ಮಕ್ಕಳ ಭವಿಷ್ಯದ ಬೆಳವಣಿಗೆಗೆ ವಿಜ್ಞಾನದ ಜ್ಞಾನ, ಸಂವಹನ ಅತ್ಯಂತ ಮಹತ್ವವಾದದ್ದು ಈ ಹಿನ್ನೆಲೆ, ಕಾರ್ಯಾಗಾರದಲ್ಲಿ ಪಡೆದ ಜ್ಞಾನವನ್ನು ಶಿಕ್ಷಕರು ವರ್ಗಕೋಣೆಯಲ್ಲಿ ಉತ್ತಮವಾಗಿ ಭೋದಿಸಿದ್ದೇ ಆದರೆ, ಭೋದನೆ ಪರಿಣಾಮಕಾರಿ ಆಗುವುದಲ್ಲದೆ, ವಿಜ್ಞಾನದ ಜ್ಞಾನ, ಮಕ್ಕಳ ಮನಸ್ಸಿನಲ್ಲಿ ಶಾಶ್ವತವಾಗಿ ನೆಲೆಸುತ್ತೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಪದ್ಮನಾಭ ಕರಣಂ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜ್ ಪ್ರೌಢಶಾಲಾ ವಿಭಾಗದಲ್ಲಿ ಶುಕ್ರವಾರ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ,ಭಾರತ ಸರ್ಕಾರ, ನವ ದೆಹಲಿ, ರಾಷ್ಟ್ರೀಯ ವಿಜ್ಞಾನ ಮತ್ತು ತಂತ್ರಜ್ಞಾನ ಸಂವಹನ ಪರಿಷತ್ತು ಅಡಿಯಲ್ಲಿ 'ವಿಕಾಸ ಕೇಂದ್ರ," ಬೆಳಗಾವಿ, ಶಾಲಾ ಶಿಕ್ಷಣ ಇಲಾಖೆ,ಉ. ಕಾ. ವಿಜಯನಗರ ಜಿಲ್ಲೆ ಸಹಯೋಗದೊಂದಿಗೆ ಏರ್ಪಡಿಸಿರುವ ಮೂರು ದಿನಗಳ ವಿಜ್ಞಾನ ಶಿಕ್ಷಕರಿಗಾಗಿ ಕಡಿಮೆ ವೆಚ್ಚದಲ್ಲಿ ಶಿಕ್ಷಣ ಪರಿಕರಗಳ ತಯಾರಿಕೆ ಮೂಲಕ ವಿಜ್ಞಾನ ಸಂವಹನ ಕಾರ್ಯಾಗಾರ ಕೇಂದ್ರಕ್ಕೆ ಭೇಟಿ ನೀಡಿ, ವೀಕ್ಷಿಸಿ ನಂತರ ಮಾತನಾಡಿದರು.

ತಾಲೂಕಿನ ಪ್ರತಿ ಪ್ರೌಢ ಶಾಲೆಗೆ 4.50 ಲಕ್ಷ ರೂ. ಕೆ.ಕೆ.ಆರ್.ಡಿ.ಬಿ ಅನುದಾನದಿಂದ ವಿಜ್ಞಾನದ ಶಿಕ್ಷಣ ಪರಿಕರಗಳ ಕಿಟ್ಟು ಮುಂಜೂರಾಗಿದ್ದು, ಲೋಕೋಪಯೋಗಿ ಇಲಾಖೆ,ಅವಶ್ಯಕ ವಿಜ್ಞಾನದ ಪರಿಕರಗಳ ಪಟ್ಟಿಕೇಳಿದ್ದು,ಪ್ರಸ್ತುತ ವರ್ಷವೇ ಎಲ್ಲಾ ಶಾಲೆಗಳಿಗೆ ಪರಿಕರಗಳು ಸರಬರಾಜು ಆಗುತ್ತವೆ ಇದರಿಂದ ಉತ್ತಮ ಭೋದನೆಗೆ ವಿಜ್ಞಾನ ಶಿಕ್ಷಕರಿಗೆ ಸಹಕಾರಿ ಆಗುತ್ತೆ ಎಂದರು.



ಉಪ ಪ್ರಿನ್ಸಿಪಾಲ್ ಬಸವರಾಜ್ ಮಾತನಾಡಿ ಕಡಿಮೆ ವೆಚ್ಚದಲ್ಲಿ ಪ್ರಯೋಗಾತ್ಮಕವಾಗಿ ಭೋದಿಸಿದಾಗ ವಿದ್ಯಾರ್ಥಿಗಳಲ್ಲಿ ಕಲಿಕಾಸಕ್ತಿ ಮತ್ತು ಸೃಜನಶೀಲತೆ ಹೆಚ್ಚಿಸುತ್ತೆ ಆದರೆ ಸಾಂಪ್ರದಾಯಿಕ ಭೋದನಾ ಪದ್ಧತಿ ಅಥವಾ ಕೇವಲ ಬೋಧನಾ ವಿಧಾನದಿಂದ ವಿದ್ಯಾರ್ಥಿಗಳಲ್ಲಿ ನಿರೀಕ್ಷಿತ ಮಟ್ಟದ ಯಶಸ್ಸನ್ನು ವಿಜ್ಞಾನದಲ್ಲಿ ಕಂಡುಕೊಳ್ಳಲು ಸಾಧ್ಯವಾಗುವುದಿಲ್ಲ ಎಂದು ಹೇಳಿದರು.

ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಸಿದ್ದಪ್ಪ ಮಾತನಾಡಿ ,ಬೋಧನೆ ಮತ್ತು ಕಲಿಕಾ ಪ್ರಕ್ರಿಯೆಗಳನ್ನು ಪರಿಣಾಮಕಾರಿಯಾಗಿಸಲು ವಿಶ್ವದಾದ್ಯಂತ ಶಿಕ್ಷಕರು ಹೊಸ ಬೋಧನಾ ಸಾಧನಗಳನ್ನು ಆವಿಷ್ಕರಿಸಿದ್ದಾರೆ ಅವುಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕೆಂದು ಕರೆ ನೀಡಿದರು.

ಕರಾವಿಪ ಜಿಲ್ಲಾ ಸಮಿತಿ ಅಧ್ಯಕ್ಷರು ಕೆ ರಾಮಣ್ಣ ಮಾತನಾಡಿ ವೈಜ್ಞಾನಿಕ ಪ್ರಕ್ರಿಯೆಯ ಪರಿಕಲ್ಪನೆಯನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಲು ಈ ತರಬೇತಿ ಕಾರ್ಯಾಗಾರದಲ್ಲಿ ಬೋಧನಾ ಸಾಮಗ್ರಿಗಳು ಶಿಕ್ಷಕರಿಗೆ ಬಹಳ ಉಪಯೋಗಕ್ಕೆ ಬರುತ್ತದೆ ಎಂದು ತಿಳಿಸಿದರು.

ಸಂಪನ್ಮೂಲ ವ್ಯಕ್ತಿಗಳಾದ ರಾಘವೇಂದ್ರ ಮಿಸಾಳೆ ಪ್ರಾಸ್ತಾವಿಕವಾಗಿ ಮಾತನಾಡಿ ಮೂರು ದಿನಗಳ ಕಾರ್ಯಾಗಾರದ ಕುರಿತು ಮಾತನಾಡಿದರು. ವಿಜಯನಗರ ಜಿಲ್ಲೆಯ ಕೂಡ್ಲಿಗಿ ಕೊಟ್ಟೂರು, ಹರಪನಹಳ್ಳಿ, ಹಗರಿಬೊಮ್ಮನಹಳ್ಳಿ, ಹಡಗಲಿ ತಾಲೂಕಿನ 60 ಜನ ಶಿಕ್ಷಕರು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು. ವಿಕಾಸನ ಸಂಸ್ಥೆಯ ಅಧ್ಯಕ್ಷ ಸಂಜಯ್ ಮುದುಗುಮ್, ರವಿಪ್ರಸಾದ್ ಕುಲಕರ್ಣಿ, ಕರವೀಪ ಕಾರ್ಯದರ್ಶಿ ಹರೀಶ್ ಗೌಡ, ಶಿವತನಯ ಇದ್ದರು. ಸಂಚಾಲಕ ಕೊಟ್ರ ಸ್ವಾಮಿ ಎಸ್ ಎಂ, ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿಗಳು ನಿರ್ವಹಿಸಿದರು.

# ಮೇಲ್ಸೇತುವೆ, ಅಂಡರ್ ಪಾಸ್ ನಿರ್ಮಿಸಲು ಒತ್ತಾಯಿಸಿ ಮನವಿ



**ಹಂಪಿ ಟೈಮ್ಸ್ ಹೊಸಪೇಟೆ:**
ನೈರುತ್ಯ ರೈಲ್ವೆ ವಲಯದ ಪ್ರಧಾನ ವ್ಯವಸ್ಥಾಪಕರಾದ ಸಂಜೀವ್ ಕಿಶೋರ್ ಮತ್ತು ಹಿರಿಯ ಅಧಿಕಾರಿಗಳು ಶುಕ್ರವಾರ ಹೊಸಪೇಟೆ ನಿಲ್ದಾಣದ ಪರಿವೀಕ್ಷಣೆಗೆ ಆಗಮಿಸಿದ ಸಂದರ್ಭದಲ್ಲಿ, ಹಗರಿಬೊಮ್ಮನಹಳ್ಳಿ ನಂದಿಪುರ ಮಠದ ಶ್ರೀ ಮಹೇಶ್ವರ ಸ್ವಾಮಿಜಿ ಇವರ ನೇತೃತ್ವದಲ್ಲಿ ವಿಜಯನಗರ ರೈಲ್ವೆ ಅಭಿವೃದ್ಧಿ ಕ್ರಿಯಾ ಸಮಿತಿಯ ಪದಾಧಿಕಾರಿಗಳು ಈ ಭಾಗದ ರೈಲ್ವೆ ಬೇಡಿಕೆಗಳನ್ನು ಅವರ ಗಮನಕ್ಕೆ ತಂದರು.

ಜಿಲ್ಲೆಯಲ್ಲಿ ಭೌಗೋಳಿಕವಾಗಿ ಕೇಂದ್ರಸ್ಥಾನದಲ್ಲಿರುವ ಹಗರಿಬೊಮ್ಮನಹಳ್ಳಿ ಪಟ್ಟಣದಲ್ಲಿ ವಾಹನಗಳು ಮತ್ತು ಸಾರ್ವಜನಿಕರ ದಟ್ಟಣೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಅಂಡರ್ ಪಾಸ್ ಎಲ್.ಸಿ.ಗೇಟ್ ನಂ : 37ಕ್ಕೆ ಮೇಲು ಸೇತುವೆ ಮತ್ತು ಎಲ್.ಸಿ.ಗೇಟ್ ನಂ : 38ಕ್ಕೆ ರೈಲ್ವೇ ಕೆಳ ಸೇತುವೆ (ಅಂಡರ್ ಪಾಸ್) ನಿರ್ಮಾಣಕ್ಕೆ ಕೂಡಲೇ ಕ್ರಮ ಕೈಗೊಳ್ಳಬೇಕು. ಹಾಗೂ ಹಗರಿಬೊಮ್ಮನಹಳ್ಳಿ ಪ್ರಯಾಣಿಕರ ಅನುಕೂಲಕ್ಕಾಗಿ ಪ್ಲಾಟ್ ಫಾರಂ ನಿರ್ಮಾಣ, ಮೂಲಸೌಕರ್ಯಗಳು ಹಾಗೂ ನಿಲ್ದಾಣವನ್ನು ಮೇಲ್ದರ್ಜೆಗೆ ಏರಿಸಬೇಕು ಎಂದು ಒತ್ತಾಯಿಸಿದರು.

ಬಳ್ಳಾರಿ – ಹೊಸಪೇಟೆ ಪ್ರದೇಶವು ರಾಜ್ಯದಲ್ಲಿ ಅತ್ಯಂತ ತ್ವರಿತವಾಗಿ ಬೆಳವಣಿಗೆಯಾಗುವ ಕೈಗಾರಿಕ ಪ್ರದೇಶವಾಗಿದೆ. ಆದುದರಿಂದ ಈ ಮಾರ್ಗದಲ್ಲಿ ಅಧಿಕ ರೈಲುಗಳ ಸಂಚಾರಕ್ಕೆ ಅನುಕೂಲವಾಗುವಂತೆ ಕಾರಿಗನೂರಿನಲ್ಲಿ ಪ್ರಯಾಣಿಕರ ಗಾಡಿಗಳ ಕೋಚಿಂಗ್ ನಿರ್ವಹಣೆ ಮತ್ತು ದುರಸ್ತಿ ಕಾರ್ಯಾಗಾರವನ್ನು ಸ್ಥಾಪಿಸಬೇಕು. ಇಲ್ಲಿಂದ ದೇಶದ ವಿವಿಧ ಭಾಗಗಳಿಗೆ ನೂತನ ರೈಲುಗಳನ್ನು ಆರಂಭಿಸಬೇಕು.

ಕೊಟ್ಟೂರು–ದಾವಣಗೆರೆ ಮಾರ್ಗವಾಗಿ ಹೊಸಪೇಟೆ–ತುಮಕೂರು ನಡುವೆ ದಿನವಹಿ ಪ್ಯಾಸಿಂಜರ್ ರೈಲನ್ನು ಆರಂಭಿಸಬೇಕು.

ಈ ಹಿಂದೆ ಹುಬ್ಬಳ್ಳಿ – ಗುಂತಕಲ್ ನಡುವೆ ಗಾಡಿ ಸಂಖ್ಯೆ : 07337/07338 ರೈಲು ಸಂಚಾರವಿತ್ತು. ಕಳೆದ 6 ತಿಂಗಳಿಂದ ಯಾವುದೇ ಕಾರಣವಿಲ್ಲದೆ ಈ ರೈಲನ್ನು ತೋರಣಗಲ್ಲು ವರೆಗೆ ಮಾತ್ರ ಸಂಚರಿಸುತ್ತಿದೆ. ಈ ರೈಲನ್ನು ಕೂಡಲೇ ಬಳ್ಳಾರಿಗೆ ವಿಸ್ತರಿಸುವಂತೆ ಆಗ್ರಹಿಸಿದರು.

ಈ ಸಂದರ್ಭದಲ್ಲಿ ವಿಜಯನಗರ ರೈಲ್ವೆ ಅಭಿವೃದ್ಧಿ ಕ್ರಿಯಾ ಸಮಿತಿಯ ಅಧ್ಯಕ್ಷ ವೈ.ಯಮುನೇಶ್, ಕಾರ್ಯದರ್ಶಿ ಮಹೇಶ್ ಕುಡತಿನಿ, ಅರವಿಂದ ಜಾಲಿ, ಪಿ.ಆರ್.ತಿಪ್ಪೇಸ್ವಾಮಿ, ಡಿ.ಪ್ರಭಾಕರ್, ಶಿವಕುಮಾರ್‌ಸಾಂಚಿ, ಸತೀಶ್‌ಪಾಟೀಲ್, ಉಮಾಶಂಕರ್, ಹೆಚ್.ಎಂ.ಮಂಜುನಾಥ, ಜೆ.ವರುಣ್, ಪಲ್ಲೇದ್ ಸಿದ್ದೇಶ್, ಎಲ್.ರಮೇಶ್, ಬಿ.ಲೋಕೇಶ್, ಬಿ.ವಿಶ್ವನಾಥ, ಬಿ. ಮಂಜುನಾಥ, ಇತರರು ಇದ್ದರು.

# ಐದು ಬಗೆಯ ಸೊಳ್ಳೆಯಿಂದ ಡೆಂಗ್ಯೂ ಪತ್ತೆ



**ಹಂಪಿ ಟೈಮ್ಸ್ ಹರಪನಹಳ್ಳಿ**
ಸೊಳ್ಳೆಗಳ ನಿಯಂತ್ರಣದ ಬಗ್ಗೆ ಪ್ರತಿಯೊಬ್ಬರೂ ಹೆಚ್ಚಿನ ಮುತುವರ್ಜಿ ವಹಿಸಬೇಕು ಎಂದು ಜಿಲ್ಲಾ ಮಲೇರಿಯಾ ಅಧಿಕಾರಿಗಳಾದ ಡಾ.ಕಮಲಮ್ಮ ಹೇಳಿದರು.

ಪಟ್ಟಣದ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಮೇಗಳಪೇಟೆ ಶಾಲೆಯಲ್ಲಿ ಗುರುವಾರ ತಾಲೂಕು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,ಕ್ಷೇತ್ರಶಿಕ್ಷಣಾಧಿಕಾರಿಗಳ ಕಾರ್ಯಾಲಯ, ಶಾಲಾ ಶಿಕ್ಷಣ ಇಲಾಖೆ ಹರಪನಹಳ್ಳಿ ಇವರ ಸಹಭಾಗಿತ್ವದಲ್ಲಿ ಸೊಳ್ಳೆ ನಿಯಂತ್ರಣ ದಿನಾಚರಣೆಯ ಅಂಗವಾಗಿ ತಾಲೂಕು ಮಟ್ಟದ ಸೊಳ್ಳೆ ನಿಯಂತ್ರಣ ಮಾದರಿಗಳ ಪ್ರದರ್ಶನದಲ್ಲಿ ಮಾತನಾಡಿದರು. ಇಡೀ ಜಿಲ್ಲೆಯಲ್ಲಿ ವಿವಿದ ಬಗೆಯ ಐದು ಸೊಳ್ಳೆಯಿಂದ ಡೆಂಗ್ಯೂ ಜ್ವರ ಬಂದಿರುವುದು ಪತ್ತೆಯಾಗಿದೆ. ಮನೆಯ ಸುತ್ತಮುತ್ತ ನೀರು ನಿಲ್ಲದ ಹಾಗೆ ಶುಚಿತ್ವವನ್ನು ಕಾಪಾಡಿಕೊಳ್ಳಬೇಕು. ಮನೆಯ ಕಿಟಕಿಗಳಿಗೆ ಜಾಲರಿಗಳನ್ನು ಬಳಸಬೇಕು. ಸಾಯಂಕಾಲ ಬೇವಿನ ಸೊಪ್ಪಿನ ಹೊಗೆಯನ್ನು ಹಾಕಬೇಕು ಎಂದು ಶಾಲಾ ಮಕ್ಕಳಿಗೆ ತಿಳುವಳಿಕೆ ನೀಡಿದರು. ಯಾವುದೇ ಜ್ವರವಿರವು ಮುನ್ಸೂಚನೆ ತಿಳಿದಲ್ಲಿ ವೈದ್ಯರ ಬಳಿ ಮೊದಲು ರಕ್ತ ಪರೀಕ್ಷೆ ಮಾಡಿಸಿಕೊಳ್ಳಿ ಎಂದು ಹೇಳಿದರು.

ತಾಲೂಕು ಆರೋಗ್ಯ ಅಧಿಕಾರಿ ಡಾ. ಹಾಲಸ್ವಾಮಿ.ಎಸ್.ಪಿ ಮಾತನಾಡಿ, ಸೊಳ್ಳೆಗಳು ಕಚ್ಚುವುದರಿಂದ ಮಲೇರಿಯಾ, ಡೆಂಗ್ಯೂ, ಚಿಕನಗುನ್ಯಾ, ಮೆದಳುಜ್ವರ, ಆನೆಕಾಲು ರೋಗ, ಜೀಕಾ ರೋಗಗಳು ಬರುತ್ತವೆ. ಅದಕ್ಕಾಗಿ ಸೊಳ್ಳೆಗಳ ನಿಯಂತ್ರಣ ಅತ್ಯವಶ್ಯಕವಾಗಿದೆ. ರೋಗಗಳು ಹರಡದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಲು ಆರೋಗ್ಯ ಇಲಾಖೆ ಜೊತೆಗೆ ಸಮುದಾಯದ ಸಹಕಾರ ಅಗತ್ಯವಾಗಿದೆ ಎಂದು ತಿಳಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಯು.ಬಸವರಾಜಪ್ಪ ಮಾತನಾಡಿ, ನೀವು ವಾಸಿಸುವ ಮನೆ ಮತ್ತು ಪರಿಸರಗಳಲ್ಲಿ ಸೊಳ್ಳೆಗಳ ಸಂತಾನೋತ್ಪತ್ತಿಗೆ ಇರುವ ಅವಕಾಶಗಳನ್ನು ನಾಶಪಡಿಸಬೇಕು. ಆ ಮೂಲಕ ಮಲೇರಿಯಾ ಡೆಂಗ್ಯೂ ಚಿಕೂನ್ ಗುನ್ಯಾ ಮತ್ತಿತರ ರೋಗಗಳ ಹರಡುವುದನ್ನ ತಡೆಗಟ್ಟಬೇಕು ಎಂದರು.

ಪ್ರಾಥಮಿಕ ವಿಭಾಗ ಮತ್ತು ಪ್ರೌಢ ವಿಭಾಗದಿಂದ ಎರಡು ವಿಭಾಗಗಳಲ್ಲಿ ತಾಲೂಕಿನ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಮಕ್ಕಳು ಅತ್ಯುತ್ತಮವಾಗಿ ಸೊಳ್ಳೆ ನಿಯಂತ್ರಣ ಮಾದರಿಗಳ ಪ್ರದರ್ಶನಕ್ಕೆ ಮಾದರಿಗಳೊಂದಿಗೆ ಹಾಜರಾಗಿ ಅತ್ಯುತ್ತಮವಾಗಿ ಸೊಳ್ಳೆ ನಿಯಂತ್ರಣ ವಿಧಾನಗಳನ್ನು ಮಾದರಿ ಮೂಲಕ ವಿವರಿಸಿದರು. ತಾಲೂಕಿನ 28 ಶಾಲೆಯ ಮಾರ್ಗದರ್ಶಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು ವಿಜೇತರಾದ ಮಕ್ಕಳಿಗೆ ಪ್ರಶಸ್ತಿ ಪತ್ರ ವಿತರಿಸಲಾಯಿತು. ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಮಾದರಿಗಳು ಅತ್ಯಾಕರ್ಷಕವಾಗಿದ್ದು, ಸೊಳ್ಳೆಗಳ ನಿಯಂತ್ರಣಗಳ ಬಗ್ಗೆ ಉತ್ತಮ ಮಾಹಿತಿಯನ್ನು ಒದಗಿಸಿದವು.

ಈ ಕಾರ್ಯಕ್ರಮದಲ್ಲಿ ಹಿರಿಯ ವೈದ್ಯಾಧಿಕಾರಿ ಡಾ.ವೆಂಕಟೇಶ್.ಪಿ.ಕೆ, ಹಿರಿಯ ಆರೋಗ್ಯ ಮೇಲ್ವಿಚಾರಕ ಮಲ್ಲಪ್ಪ, ಹಿರಿಯ ಆರೋಗ್ಯ ಮೇಲ್ವಿಚಾರಕ ರುದ್ರಾಚಾರಿ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಗೌರಮ್ಮ ಹಾಗೂ ಭುವನೇಶ್ವರಿ, ಶಿಕ್ಷಣ ಸಂಯೋಜಕ ಗಿರಜ್ಜಿ ಮಂಜುನಾಥ್, ಸಿಆರ್‌ಪಿಗಳಾದ ಗಿರಿರಾಜ್.ಎಲ್.ಎಚ್, ಮೋಹನ್ ಕುಮಾರ್.ಕೆ.ಎಚ್, ಎಚ್. ಎಮ್.ಶಿವಪ್ರಕಾಶ್, ಮುಖ್ಯ ಶಿಕ್ಷಕ ಹೆಚ್.ಸಲೀಂ ಮತ್ತು ಆನೇಕ ಶಿಕ್ಷಕರು ಭಾಗವಹಿಸಿದ್ದರು.

# ಸ್ಕಿಲ್ ಡೆವಲಪ್‌ಮೆಂಟ್ ಸೆಂಟರ್‌ಗೆ ಸಿಇಓ ಭೇಟಿ ಪರಿಶೀಲನೆ



**ಹಂಪಿ ಟೈಮ್ಸ್ ಬಳ್ಳಾರಿ**
ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಜಿಲ್ಲಾ ಚೇಂಬರ್ ಸ್ಕಿಲ್ ಡೆವಲಪ್‌ಮೆಂಟ್ ಸೆಂಟರ್‌ಗೆ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ಶುಕ್ರವಾರ ಭೇಟಿ ನೀಡಿ, ವ್ಯವಸ್ಥೆಯನ್ನು ಪರಿಶೀಲನೆ ಮಾಡಿದರು.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ರೈತಣ್ಣ ಊಟ, ರೈತಣ್ಣ ಕ್ಲಿನಿಕ್ ಮತ್ತು ರೈತಣ್ಣ ಹಾಸಿಗೆಯ ವಿಶೇಷಗಳನ್ನು ತಿಳಿದುಕೊಂಡು, ವಾಣಿಜ್ಯೋದ್ಯಮಿಗಳು ಮತ್ತು ಕೈಗಾರಿಕೋದ್ಯಮಿಗಳಿಂದ ಕೂಡಿರುವ ಸಂಸ್ಥೆ ಜನಸೇವೆಯಲ್ಲಿ ತೊಡಗಿರುವುದಕ್ಕೆ ಸಂತೋಷ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಸ್ಕಿಲ್ ಡೆವಲಪ್‌ಮೆಂಟ್ ಸೆಂಟರ್‌ನಲ್ಲಿ ಹೋಟಲ್ ಮ್ಯಾನೇಜ್‌ಮೆಂಟ್ ಕೋರ್ಸ್ ಹಾಗೂ ಇನ್ನಿತರೆ ವಿಷಯಗಳ ಕೋರ್ಸ್‌ಗಳನ್ನು ಪ್ರಾರಂಭಿಸಲು ಅಗತ್ಯ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA